14th to 20th JUNE

## POLITY

1. ನೀತಿ ಆಯೋಗದ ಆಡಳಿತ ಮಂಡಳಿ

2.ಸಂಯೋಜಿತ ನೀರು ನಿರ್ವಹಣೆ ಸೂಚ್ಯಂಕ

3. ಅಣೆಕಟ್ಟು ಸುರಕ್ಷತಾ ಮಸೂದೆಗೆ ಕೇಂದ್ರ ಒಪ್ಪಿಗೆ

4. ವಿಶ್ವಸಂಸ್ಥೆಯ ವರದಿಗೆ ಭಾರತ ವಿರೋಧ

5. 'ಒನ್ ಬೆಲ್ಟ್ ಒನ್ ರೋಡ್' ಬಗ್ಗೆ ಭಾರತದ ನಿಲುವು

## ECONOMY

1.ಅಂಚೆ ಇಲಾಖೆಯ ಗ್ರಾಮೀಣ ದಾಕ್ ಸೇವಕರ ವೇತನ ಮತ್ತು ಭತ್ಯೆ ಪರಿಷ್ಕರಣೆಗೆ ಸಂಪುಟ ಅನುಮೋದನೆ

2. ಸಮುದಾಯ ಸಹಭಾಗಿತ್ವದ ಸ್ವಜಲ ಯೋಜನೆ

3. ನಷ್ಟ / ಸಂಕಷ್ಟದಲ್ಲಿರುವ ಸಾರ್ವಜನಿಕ ವಲಯದ ಉದ್ದಿಮೆಗಳನ್ನು ಕಾಲಮಿತಿಯಲ್ಲಿ ಮುಚ್ಚುವ ಮತ್ತು ಅವುಗಳ ಸ್ಥಿರ ಮತ್ತು ಚರಾಸ್ಥಿ ವಿಲೇವಾರಿ ಮಾಡುವ ಪರಿಷ್ಕೃತ ಮಾರ್ಗಸೂಚಿಗೆ ಕೇಂದ್ರ ಸಂಪುಟ ಅನುಮೋದನೆ

4. ಭಾರತದ ಸಕ್ಕರೆ ಉದ್ದಿಮೆಗೆ ಪ್ಯಾಕೇಜ್

## S&T

1.. ಜಗತ್ತಿನ ಅತಿ ವೇಗದ ಸೂಪರ್ ಕಂಪ್ಯೂಟರ್-ಸಮ್ಮಿಟ್

2. ಶಾಂತಿಯುತ ಉದ್ದೇಶಗಳಿಗಾಗಿ ಬಾಹ್ಯಾಕಾಶ ಬಳಸಿಕೊಳ್ಳುವ ಉದ್ದೇಶದ ಭಾರತ-ಓಮಾನ್ ನಡುವಿನ ಒಡಂಬಡಿಕೆಗೆ ಕೇಂದ್ರ ಸಂಪುಟದ ಅನುಮೋದನೆ.

**3. ಧ್ರುವಉಪಗ್ರಹ ಉಡ್ಡಯಕ ವಾಹನ ಮಾರ್ಕ್ III ಮುಂದುವರಿಕೆ ಕಾರ್ಯಕ್ರಮ ಹಂತ 6ಕ್ಕೆ ಸಂಪುಟ ಅನುಮೋದನೆ.**

4. ಕ್ವಾಂಟಂ ಲೀಫ್

## INTERNATIONAL RELATIONS

**1.ಭಾರತೀಯರು ಅಮೆರಿಕದ ಪ್ರಜೆಯಾಗುವುದು ಕಷ್ಟಕರ: ಅಧ್ಯಯನ ವರದಿ**

2. ಸೈಬರ್ ಭದ್ರತೆ ಭಯೋತ್ಪಾದನೆ ನಿಗ್ರಹ ಸಹಕಾರಕ್ಕೆ ಭಾರತ-ಇಟಲಿ ನಿರ್ಧಾರ

**3. ಚೀನಾ ಸರಕುಗಳ ಮೇಲೆ 50 ಶತಕೋಟಿ ಡಾಲರ್ ಸುಂಕ ವಿಧಿಸಿದ ಅಮೆರಿಕ**

**4. ಭಾರತಕ್ಕೆ ಅಪಾಚೆ ಕಾಪ್ಟರ್ ಮಾರಾಟಕ್ಕೆ ಅಮೆರಿಕ ಅಸ್ತು**

**5. ಭಾರತ ಮತ್ತು ಫ್ರಾನ್ಸ್ ನಡುವೆ ಸುಸ್ಥಿರ ನಗರಾಭಿವೃದ್ಧಿ ಕ್ಷೇತ್ರದಲ್ಲಿ ತಾಂತ್ರಿಕ ಸಹಕಾರ ಕುರಿತ ಒಪ್ಪಂದಕ್ಕೆ ಸಂಪುಟ ಅಂಗೀಕಾರ.**

**6. ಸಣ್ಣ ಉಪಗ್ರಹಗಳ ಉಡ್ಡಯನಕ್ಕೆ ಇಸ್ರೋ ಸಜ್ಜು**

IAS/KAS
ನಮ್ಮ ಐಎಎಸ್ ಅಕಾಡೆಮಿ
ನಿಮ್ಮೂರಿಂದ..... ಮಸ್ಸೂರಿಗೆ/ಮೈಸೂರಿಗೆ

## OTHERS

**1. ವಿಶ್ವ ರಕ್ತದಾನಿಗಳ ದಿನ**

**2. ಅಮೆರಿಕದ ಕಂಪನಿಗೆ ದಿವ್ಯಾ ಸಿಎಫ್‌ಓ**

**3. ಗೌರಿಶಂಕರಕ್ಕೆ ಕಸದ ಅವಮಾನ**

**5. 23ನೇ ಯುರೋಪಿಯನ್ ಚಲನಚಿತ್ರೋತ್ಸವ**

**4. 106ನೇ ಭಾರತೀಯ ವಿಜ್ಞಾನ ಸಮ್ಮೇಳನ**

**POLITY**

## 1. ನೀತಿ ಆಯೋಗದ ಆಡಳಿತ ಮಂಡಳಿ

### ಪ್ರಮುಖ ಸುದ್ದಿ

- ಪ್ರಧಾನಮಂತ್ರಿ ಶ್ರೀ ನರೇಂದ್ರ ಮೋದಿ ಅವರ ಅಧ್ಯಕ್ಷತೆಯಲ್ಲಿ ನಡೆದ ನೀತಿ ಆಯೋಗದ ಆಡಳಿತ ಮಂಡಳಿಯ ನಾಲ್ಕನೇ ಸಭೆಯಲ್ಲಿ ಉದ್ಘಾಟನಾ ಭಾಷಣ ಮಾಡಿದರು.

- ಮುಖ್ಯಮಂತ್ರಿಗಳು ಮತ್ತು ಇತರ ಪ್ರತಿನಿಧಿಗಳನ್ನು ಸ್ವಾಗತಿಸಿದ ಪ್ರಧಾನಮಂತ್ರಿಯವರು, ಆಡಳಿತ ಮಂಡಳಿಯು "ಐತಿಹಾಸಿಕ ಬದಲಾವಣೆ" ತರಬಲ್ಲ ವೇದಿಕೆಯಾಗಿದೆ ಎಂಬುದನ್ನು ಪುನರುಚ್ಚರಿಸಿದರು. ದೇಶದ ಕೆಲವು ಭಾಗಗಳಲ್ಲಿ ಪ್ರವಾಹದಿಂದ ಎದುರಾಗಿರುವ ಪರಿಸ್ಥಿತಿಯನ್ನು ಎದುರಿಸಲು ಕೇಂದ್ರ ಸರ್ಕಾರ ಎಲ್ಲ ಅಗತ್ಯ ನೆರವು ಒದಗಿಸಲಿದೆ ಎಂಬ ಭರವಸೆಯನ್ನು ಪ್ರವಾಹ ಪೀಡಿತ ರಾಜ್ಯಗಳ ಮುಖ್ಯಮಂತ್ರಿಗಳಿಗೆ ಅವರು ನೀಡಿದರು.

ನಮ್ಮ ಐಎಎಸ್ ಅಕಾಡೆಮಿ
ನಿಮ್ಮೂರಿಂದ..... ಮಸ್ಸೂರಿಗೆ/ಮೈಸೂರಿಗೆ

### ಮುಖ್ಯ ಅಂಶಗಳು

- ಸಹಕಾರ, ಸ್ಪರ್ಧಾತ್ಮಕ ಒಕ್ಕೂಟ ವ್ಯವಸ್ಥೆಯ ಸ್ಫೂರ್ತಿಯೊಂದಿಗೆ "ಟೀಮ್ ಇಂಡಿಯಾ"ದಂಥ ಆಡಳಿತದ ಸಂಕೀರ್ಣ ವಿಷಯಗಳ ಬಗ್ಗೆ ಆಡಳಿತ ಮಂಡಳಿ ಗಮನ ಹರಿಸಿದೆ ಎಂದರು. ಸುಗಮವಾಗಿ ಜಿಎಸ್ಟಿಯನ್ನು ಜಾರಿ ಮಾಡಿ ಮತ್ತು ಅನುಷ್ಠಾನಗೊಳಿಸಿದ್ದು ಇದಕ್ಕೆ ಒಂದು ಉತ್ತಮ ಉದಾಹರಣೆಯಾಗಿದೆ ಎಂದು ಅವರು ವಿವರಿಸಿದರು.

- ಸ್ವಚ್ಛ ಭಾರತ ಅಭಿಯಾನ, ಡಿಜಿಟಲ್ ವಹಿವಾಟು ಮತ್ತು ಕೌಶಲ ಅಭಿವೃದ್ಧಿ ವಿಚಾರಗಳಲ್ಲಿ ಉಪ ಗುಂಪುಗಳು ಮತ್ತು ಸಮಿತಿಗಳ ಮೂಲಕ ನೀತಿ ನಿರೂಪಣೆಯಲ್ಲಿ ರಾಜ್ಯಗಳ ಮುಖ್ಯಮಂತ್ರಿಗಳು

ಮಹತ್ವದ ಪಾತ್ರ ನಿರ್ವಹಿಸಿದ್ದಾರೆ ಎಂದು ಪ್ರಧಾನಮಂತ್ರಿಯವರು ತಿಳಿಸಿದರು. ಈ ಉಪ ಗುಂಪುಗಳ ಶಿಫಾರಸುಗಳನ್ನು ಕೇಂದ್ರ ಸರ್ಕಾರದ ವಿವಿಧ ಸಚಿವಾಲಯಗಳು ಅಳವಡಿಸಿಕೊಂಡಿವೆ ಎಂದೂ ಅವರು ತಿಳಿಸಿದರು.

## BACK TO BASICS

### ನೀತಿ ಆಯೋಗದ ಬಗ್ಗೆ

- ನೀತಿ ಆಯೋಗ ಅಥವಾ ಭಾರತದ ಬದಲಾವಣೆಗಾಗಿನ ರಾಷ್ಟ್ರೀಯ ಸಂಸ್ಥೆ(ನ್ಯಾಷನಲ್ ಇನ್ಸ್ಟ್ಯೂಟಷನ್ ಫಾರ್ ಟ್ರಾನ್ಸ್ ಫಾರ್ಮಿಂಗ್ ಇಂಡಿಯಾ)ವನ್ನು ಭಾರತದ ಯೋಜನಾ ಆಯೋಗದ ಬದಲಿಗೆ ೨೦೧೫ರಲ್ಲಿ ಸ್ಥಾಪಿಸಲಾಗಿದೆ..
- ಇದು ಮುಖ್ಯವಾಗಿ ಭಾರತದ ಆರ್ಥಿಕ ಬೆಳವಣಿಗೆಗೆ ಸಹಕಾರಿಯಾಗಿ ಕೇಂದ್ರ ಮತ್ತು ರಾಜ್ಯ ಸರಕಾರಗಳ ನೀತಿ ರೂಪಣೆಯಲ್ಲಿ ಬೌದ್ಧಿಕ ಸಂಸ್ಥೆಯಾಗಿ ಕಾರ್ಯನಿರ್ವಹಿಸುತ್ತದೆ.

IAS/KAS
ನಮ್ಮ ಐಎಎಸ್ ಅಕಾಡೆಮಿ
ನಿಮ್ಮೂರಿಂದ..... ಮಸ್ಸೂರಿಗೆ/ಮೈಸೂರಿಗೆ

### ನೀತಿ ಆಯೋಗದ ಸದಸ್ಯರು

- ಅಧ್ಯಕ್ಷರು: ಪ್ರಧಾನಿ ನರೇಂದ್ರ ಮೋದಿ,
- ಆಡಳಿತದ ಸಮಿತಿ (ಕೌನ್ಸಿಲ್): ರಾಜ್ಯಗಳು ಮತ್ತು ಕೇಂದ್ರಾಡಳಿತ ಪ್ರದೇಶಗಳಿಗೆ ಎಲ್ಲಾ ಮುಖ್ಯಮಂತ್ರಿಗಳು ಮತ್ತು ಲೆಫ್ಟಿನೆಂಟ್ ಗವರ್ನರ್ಗಳು.

### ಕಾರ್ಯಕ್ಷೇತ್ರ

- ದೇಶದ ಅಭಿವೃದ್ಧಿಗೆ ಪರಿಗಣಿಸಬೇಕಾದ ವಿಷಯಗಳು,ಕ್ಷೇತ್ರಗಳು ಮತ್ತು ತಂತ್ರಗಳ ಕುರಿತು ರಾಜ್ಯಗಳ ಸಲಹೆಯೊಂದಿಗೆ ನೀತಿ ರೂಪಿಸುವುದು ಇದರ ಪ್ರಮುಖ ಕೆಲಸ.
- ಕೇಂದ್ರ -ರಾಜ್ಯಗಳ ನೀತಿ ರೂಪಣೆ ವಿಷಯದಲ್ಲಿ "ಚಿಂತಕರ ಚಾವಡಿ"ಯ ಪಾತ್ರವಹಿಸಿ ಸಲಹೆ ಸೂಚನೆಗಳನ್ನು ನೀಡುವುದು,ತಳಮಟ್ಟದಿಂದಲೇ ಅಭಿವೃದ್ಧಿಯಾಗುವಂತೆ ನೋಡಿಕೊಳ್ಳುವುದು ಮತ್ತು ಅಭಿವೃದ್ಧಿಯ ಮೌಲ್ಯಮಾಪನ ಮಾಡುವುದು.

## 2.ಸಂಯೋಜಿತ ನೀರು ನಿರ್ವಹಣೆ ಸೂಚ್ಯಂಕ

### ಪ್ರಮುಖ ಸುದ್ದಿ

- ನೀತಿ ಆಯೋಗ ಇತ್ತೀಚೆಗೆ ಸಂಯೋಜಿತ ನೀರು ನಿರ್ವಹಣೆ ಸೂಚ್ಯಂಕವನ್ನು ಬಿಡುಗಡೆ ಮಾಡಿದೆ. ರಾಷ್ಟ್ರಾದ್ಯಂತ ಇರುವ ನೀರಿನ ಸಮಸ್ಯೆ ಕುರಿತು ಜನರಿಗೆ ಮತ್ತು ಸರ್ಕಾರಗಳಿಗೆ ಮಾಹಿತಿ ನೀಡುವುದು ಇದರ ಉದ್ದೇಶ.

### ಮುಖ್ಯ ಅಂಶಗಳು

### ಉದ್ದೇಶಗಳು:

- ಜಲಸಂಪನ್ಮೂಲವನ್ನು ಸಮರ್ಪಕವಾಗಿ ನಿರ್ವಹಿಸಲು ಅಗತ್ಯವಾದ ನೀತಿಗಳನ್ನು ರೂಪಿಸಿ ಅನುಷ್ಠಾನಗೊಳಿಸುವ ನಿಟ್ಟಿನಲ್ಲಿ ಕೇಂದ್ರ ಮತ್ತು ರಾಜ್ಯ ಸರ್ಕಾರಗಳಿಗೆ ಉಪಯುಕ್ತ ಮಾಹಿತಿಯನ್ನು CWMI ಒದಗಿಸುತ್ತದೆ.
- ಆಯಾ ರಾಜ್ಯದಲ್ಲಿ ಸರ್ಕಾರಗಳು ನೀರು ನಿರ್ವಹಣೆ ಕುರಿತು ಕೈಗೊಂಡಿರುವ ಕ್ರಮಗಳು, ಜಾರಿಗೊಳಿಸಿರುವ ಕಾರ್ಯಕ್ರಮಗಳನ್ನು ಆಧರಿಸಿ ನೀತಿ ಆಯೋಗ ಸೂಚ್ಯಂಕವನ್ನು ಸಿದ್ಧಪಡಿಸುತ್ತದೆ.
- ಅಂತರ್ಜಲ, ಜಲಮೂಲಗಳ ಸಂರಕ್ಷಣೆ, ಕೃಷಿ, ಕೃಷಿಪದ್ಧತಿ, ಕುಡಿಯುವ ನೀರು, ನೀತಿ ಮತ್ತು ಆಡಳಿತ ಸೇರಿ ಒಟ್ಟು 9 ಪ್ರಮುಖ ವಲಯಗಳು ಮತ್ತು 28 ಅಂಶಗಳನ್ನು ಆಧರಿಸಿ ಸೂಚ್ಯಂಕವನ್ನು ಸಿದ್ಧಪಡಿಸಲಾಗುತ್ತದೆ.

**ಉತ್ತಮ ಮತ್ತು ಕಳಪೆ ಸಾಧನೆ:**

- ನೀತಿ ಆಯೋಗ 2016-17ನೇ ಸಾಲಿನ CWMI ವರದಿ ಬಿಡುಗಡೆ ಮಾಡಿದೆ. ಈ ಪಟ್ಟಿಯಲ್ಲಿ ಗುಜರಾತ್ ಮೊದಲ ಸ್ಥಾನದಲ್ಲಿದ್ದರೆ, ಮಧ್ಯಪ್ರದೇಶ, ಆಂಧ್ರ ಪ್ರದೇಶ, ಕರ್ನಾಟಕ ಮತ್ತು ಮಹಾರಾಷ್ಟಗಳು ನಂತರದ ಸ್ಥಾನದಲ್ಲಿವೆ.
- ಜಾರ್ಖಂಡ, ಹರಿಯಾಣ, ಉತ್ತರ ಪ್ರದೇಶ ಮತ್ತು ಬಿಹಾರ ಅತಿ ಕಳಪೆ ಸಾಧನೆ ಮಾಡಿದ ರಾಜ್ಯಗಳು ಎನಿಸಿಕೊಂಡಿವೆ. ಈಶಾನ್ಯ ಮತ್ತು ಹಿಮಾಲಯ ತಪ್ಪಲಿನ ರಾಜ್ಯಗಳ ಪೈಕಿ ತ್ರಿಪುರಾ ಮೊದಲ ಸ್ಥಾನ ಪಡೆದುಕೊಂಡಿದ್ದರೆ, ಹಿಮಾಚಲ ಪ್ರದೇಶ, ಸಿಕ್ಕಿಂ ಮತ್ತು ಅಸ್ಸಾಂ ನಂತರದ ಸ್ಥಾನದಲ್ಲಿವೆ.

**ಆತಂಕಗಳು:**

- ಇತಿಹಾಸದಲ್ಲೇ ಮೊದಲ ಬಾರಿಗೆ ಭಾರತದಾದ್ಯಂತ ನೀರಿನ ಕೊರತೆ ಉಂಟಾಗಿದೆ. ಇದರಿಂದಾಗಿ ಸಹಸ್ರಾರು ಜನರು, ಪ್ರಾಣಿ, ಪಕ್ಷಿ ಸಂಕುಲಗಳು ತೀವ್ರ ಸಂಕಷ್ಟಕ್ಕೆ ಸಿಲುಕಿವೆ. 600 ದಶಲಕ್ಷ ಜನರಿಗೆ ಕುಡಿವ ನೀರು ಸಿಗುವುದೇ ದುಸ್ತರವಾಗಿದೆ.
- ಕುಡಿಯಲು ಶುದ್ಧವಾದ ನೀರಿನ ಲಭ್ಯತೆಯ ಕೊರತೆಯಿಂದಾಗಿ ಪ್ರತಿವರ್ಷ 2 ಲಕ್ಷಕ್ಕೂ ಹೆಚ್ಚು ಜನರು ಸಾಯುತ್ತಿದ್ದಾರೆ. 2030ರ ವೇಳೆಗೆ ರಾಷ್ಟ್ರದಾದ್ಯಂತ ನೀರಿನ ಬೇಡಿಕೆ ಪ್ರಮಾಣ ಹೆಚ್ಚಾಗಲಿದೆ. ಅಂದಾಜಿನ ಪ್ರಕಾರ ಪೂರೈಕೆಗಿಂತಲೂ ಬೇಡಿಕೆ ದುಪ್ಪಟ್ಟಾಗಲಿದೆ. ಇದರಿಂದಾಗಿ ಕುಡಿವ ನೀರು ಸಿಗದೆ ಕೋಟ್ಯಂತರ ಜನರು ಸಾಯುವ ಸಾಧ್ಯತೆ ಹೆಚ್ಚಾಗಿದೆ.

**ಪರಿಸ್ಥಿತಿ ಸುಧಾರಣೆ ಹಾದಿ:**

- ರಾಷ್ಟ್ರ ನೀರಿನ ಕೊರತೆ ಸಮಸ್ಯೆಯನ್ನು ಎದುರಿಸುತ್ತಿದೆ. ನೀರಿನ ಲಭ್ಯತೆ ಗಿಂತಲೂ ಲಭ್ಯವಿರುವ ಜಲಸಂಪನ್ಮೂಲ ನಿರ್ವಹಣೆಯಲ್ಲಿ ಎಡವುತ್ತಿರುವುದು ಆತಂಕಕ್ಕೆ ಕಾರಣವಾಗಿದೆ. ರಾಷ್ಟ್ರಮಟ್ಟದಲ್ಲಿ ಹಾಗೂ ರಾಜ್ಯಗಳ ನಡುವೆ ನೀರು ನಿರ್ವಹಣೆ ಕುರಿತು ಯಾವುದೇ ಕಾರ್ಯಕ್ರಮ ಅಥವಾ

ಒಪ್ಪಂದಗಳಿಲ್ಲ. ಆದರೆ, ಈ ವಿಷಯದಲ್ಲಿ ಕೇಂದ್ರ ಮತ್ತು ರಾಜ್ಯ ಸರ್ಕಾರಗಳು ಒಗ್ಗೂಡಿ ಕೆಲಸ ಮಾಡಿದರೆ, ನೀರಿನ ಸಮಸ್ಯೆ ಪರಿಹರಿಸಲು ಸಾಧ್ಯ.

- ಜಲನಿರ್ವಹಣೆ ವಿಷಯದಲ್ಲಿ ಉತ್ತಮ ಕೆಲಸ ಮಾಡುತ್ತಿರುವ ರಾಜ್ಯಕ್ಕೆ ಬಹುಮಾನ ನೀಡಿ ಪ್ರೋತ್ಸಾಹಿಸುವುದರಿಂದ ಈ ಸಮಸ್ಯೆ ಪರಿಹರಿಸಲು ಸಾಧ್ಯವಿದೆ.

### 3. ಅಣೆಕಟ್ಟು ಸುರಕ್ಷತಾ ಮಸೂದೆಗೆ ಕೇಂದ್ರ ಒಪ್ಪಿಗೆ

#### ಪ್ರಮುಖ ಸುದ್ದಿ

- ಅಣೆಕಟ್ಟು ಸುರಕ್ಷತಾ ಮಸೂದೆ-2018ಕ್ಕೆ ಕೇಂದ್ರ ಸಚಿವ ಸಂಪುಟ ಒಪ್ಪಿಗೆ ಸೂಚಿಸಿದೆ. ಈ ಮಸೂದೆಯು ಕಾಯ್ದೆಯಾದಲ್ಲಿ, ದೇಶದ ಎಲ್ಲಾ ಅಣೆಕಟ್ಟುಗಳಿಗೆ ಏಕರೀತಿಯ ಭದ್ರತೆಯನ್ನು ಕಲ್ಪಿಸಬೇಕಾಗುತ್ತದೆ,

#### ಮುಖ್ಯ ಅಂಶಗಳು

- ‘ಅಣೆಕಟ್ಟುಗಳ ಸುರಕ್ಷತೆಗೆ ಮಾರ್ಗಸೂಚಿಗಳನ್ನು ಸಿದ್ಧಪಡಿಸಲು ತಜ್ಞರ ಸಮಿತಿಯೊಂದನ್ನು ರಚಿಸಲು ಮಸೂದೆ ಅವಕಾಶ ಮಾಡಿಕೊಡುತ್ತದೆ. ಆ ಸಮಿತಿಯು ನಿಯಮಾವಳಿಗಳನ್ನು ರೂಪಿಸಲಿದೆ. ರಾಜ್ಯ ಸರ್ಕಾರಗಳು ಮತ್ತು ಕೇಂದ್ರಾಡಳಿತ ಪ್ರದೇಶಗಳು ತಮ್ಮ ಅಧೀನದಲ್ಲಿರುವ ಅಣೆಕಟ್ಟುಗಳ ರಕ್ಷಣೆಗೆ ಆ ನಿಯಮಾವಳಿಗಳನ್ನು ಅನುಸರಿಸಬೇಕಾಗುತ್ತದೆ’ .

- ‘ರಾಷ್ಟ್ರೀಯ ಅಣೆಕಟ್ಟು ಸುರಕ್ಷತಾ ಪ್ರಾಧಿಕಾರ ರಚನೆಗೂ ಈ ಮಸೂದೆ ಅವಕಾಶ ಮಾಡಿಕೊಡಲಿದೆ. ಸುರಕ್ಷತಾ ನಿಯಮಗಳ ಅನುಷ್ಠಾನದ ಮೇಲ್ವಿಚಾರಣೆಯನ್ನು ಈ ಪ್ರಾಧಿಕಾರ ನಡೆಸಲಿದೆ.

- ಜತೆಗೆ ಎರಡು ರಾಜ್ಯಗಳಲ್ಲಿ ಹಂಚಿ ಹೋಗಿರುವ ಅಣೆಕಟ್ಟುಗಳಿದ್ದರೆ, ಅದರ ರಕ್ಷಣೆಯ ಜವಾಬ್ದಾರಿ ಯಾರದ್ದು ಎಂಬುದನ್ನೂ ಈ ಪ್ರಾಧಿಕಾರ ನಿರ್ಧರಿಸಲಿದೆ ಎಂದು ಅವರು ವಿವರಿಸಿದ್ದಾರೆ. ದೇಶದಲ್ಲಿ 5,200 ಬೃಹತ್ ಅಣೆ ಕಟ್ಟುಗಳಿವೆ. 450 ಬೃಹತ್ ಅಣೆಕಟ್ಟುಗಳ ನಿರ್ಮಾಣ ಪ್ರಗತಿಯಲ್ಲಿದೆ.

**4. ವಿಶ್ವಸಂಸ್ಥೆಯ ವರದಿಗೆ ಭಾರತ ವಿರೋಧ**

**ಪ್ರಮುಖ ಸುದ್ದಿ**

- ಜಮ್ಮು- ಕಾಶ್ಮೀರದಲ್ಲಿನ ಹಿಂಸಾಚಾರಕುರಿತ ವಿಶ್ವಸಂಸ್ಥೆಯವರದಿಯಿಂದ ಭಾರತದ ಸಾರ್ವಭೌಮತೆ ಹಾಗೂ ಘನತೆಗೆ ಧಕ್ಕೆ ಉಂಟಾಗಿದೆ ಎಂದು ಭಾರತ ಸರ್ಕಾರ ವಿರೋಧ ವ್ಯಕ್ತಪಡಿಸಿದೆ. ಕೆಲವೇ ಮಾಹಿತಿಗಳನ್ನು ಸಂಗ್ರಹಿಸಿ, ಪರಿಶೀಲಿಸದೇ ವರದಿ ಪ್ರಕಟಿಸಲಾಗಿದೆ. ಇದನ್ನು ಭಾರತ ತಿರಸ್ಕರಿಸುತ್ತದೆ. ಪಾಕ್, ಭಾರತವನ್ನು ಹೋಲಿಸುವುದು ಸರಿಯಾದ ಕ್ರಮವಲ್ಲ. ಕಾಶ್ಮೀರದಲ್ಲಿ ಪ್ರಜಾಪ್ರಭುತ್ವ ಸರ್ಕಾರವಿದ್ದು, ಪಿಒಕೆಯಲ್ಲಿ ಪಾಕ್ ಬಲವಂತದ ರಾಜತಾಂತ್ರಿಕ ಆಡಳಿತ ನಡೆಸುತ್ತಿದೆ. ಇದೊಂದುನಿರಾಶಾದಾಯಕ ಹಾಗೂ ಪೂರ್ವಗ್ರಹ ಪೀಡಿತ ವರದಿ ಎಂದು ಭಾರತ ಕಟುವಾಗಿ ಹೇಳಿದೆ.

ನಮ್ಮ ಐಎಎಸ್ ಅಕಾಡೆಮಿ
ನಿಮ್ಮೂರಿಂದ..... ಮಸ್ಸೂರಿಗೆ/ಮೈಸೂರಿಗೆ

**ಮುಖ್ಯ ಅಂಶಗಳು**

- ಜಮ್ಮು- ಕಾಶ್ಮೀರ ಹಾಗೂ ಪಾಕಿಸ್ತಾನ ಆಕ್ರಮಿತ ಕಾಶ್ಮೀರದಲ್ಲಿ ಕಠಿ ನಡೆಯುತ್ತಿರುವ ಮಾನವ ಹಕ್ಕು ಉಲ್ಲಂಘನೆಗೆ ಸಂಬಂಧಿಸಿ ವಿಶ್ವಸಂಸ್ಥೆ ಇದೇ ಮೊದಲ ಬಾರಿಗೆ ವರದಿ ಬಿಡುಗಡೆ ಮಾಡಿದೆ. ಗಡಿ ಭಾಗದಲ್ಲಿ ನಾಗರಿಕರ ಮೇಲೆ ನಡೆಯುತ್ತಿರುವ ದೌರ್ಜನ್ಯ ಕುರಿತು ಅಂತಾರಾಷ್ಟ್ರೀಯ ಮಟ್ಟದಲ್ಲಿ ತನಿಖೆ ನಡೆಯಬೇಕು ಎಂದು ಆಗ್ರಹಿಸಿದೆ. 2016 ಜೂನ್‌ನಿಂದ 2018 ಏಪ್ರಿಲ್ ಅವಧಿಯ ವಿದ್ಯಾಮಾನ ಆಧರಿಸಿ ಈ ವರದಿ ತಯಾರಾಗಿದೆ.

**ವರದಿಯಲ್ಲಿ ಇಲ್ಲದ್ದು..**

- ಕಾಶ್ಮೀರದಲ್ಲಿ ದುಷ್ಕರ್ಮಿಗಳು ಸೇನೆಯ ಮೇಲೆ ಕಲ್ಲು ತೂರಾಟ ನಡೆಸುತ್ತಿದ್ದಾರೆ. ನೂರಾರು ಭದ್ರತಾ ಸಿಬ್ಬಂದಿ ಗಾಯ ಗೊಂಡಿದ್ದಾರೆ. ಪಾಕಿಸ್ತಾನದಿಂದ ಅಕ್ರಮವಾಗಿ ನುಸುಳುವ ಉಗ್ರರು ಹಿಂಸಾಚಾರ ನಡೆಸುತ್ತಿದ್ದಾರೆ. ಆದರೆ ಈ ವಿಚಾರವನ್ನು ವರದಿಯಲ್ಲಿ ಪ್ರಮುಖವಾಗಿ – ಪ್ರಸ್ತಾಪಿಸಿಲ್ಲ ಎಂಬ ಆರೋಪವೂ ಕೇಳಿಬರುತ್ತಿದೆ.

### ವರದಿಯಲ್ಲಿ ಹೇಳಿದೇನು?

ಜಮ್ಮು-ಕಾಶ್ಮೀರ ಕುರಿತು...

- ನ್ಯಾಯಾಂಗ ವ್ಯವಸ್ಥೆಯಿಂದ ಜನರು ವಂಚಿತ ರಾಗಿದ್ದಾರೆ. ತಮಗೆ ಉಂಟಾಗಿರುವ ಅನ್ಯಾಯ ವಿರುದ್ಧ ಕಾನೂನು ಹೋರಾಡಲು ನಡೆಸಲು ಸಾಧ್ಯವಾಗುತ್ತಿಲ್ಲ
- ಭಾರತೀಯ ಸೇನೆಗೆ ಇಲ್ಲಿ ವಿಶೇಷಾಧಿಕಾರ ನೀಡಲಾಗಿದೆ. ಒಂದು ವೇಳೆ ಅವರು ಮಾನವ ಹಕ್ಕು ಉಲ್ಲಂಘನೆ ಮಾಡಿದರೂ, ಸರ್ಕಾರದ ಅನುಮತಿ ಇಲ್ಲದೇ ಅವರ ವಿರುದ್ಧ ವಿಚಾರಣೆ ನಡೆಸಲು ಸಾಧ್ಯವಿಲ್ಲ
- ಸೇನಾ ಸಿಬ್ಬಂದಿ ನಡೆಸಿದ ದೌರ್ಜನ್ಯ, ಮಾನವ ಹಕ್ಕು ಉಲ್ಲಂಘನೆ ಪ್ರಕರಣಗಳನ್ನು ಮಿಲಿಟರಿ ಕೋರ್ಟ್‌ಗೆ ವಹಿಸಲಾಗುತ್ತದೆ. ಅಂತಾರಾಷ್ಟ್ರೀಯ ನಿಯಮಾವಳಿ ಪ್ರಕಾರ ಇಲ್ಲಿ ವಿಚಾರಣೆ ನಡೆಯುವುದಿಲ್ಲ
- ಮಾನವ ಹಕ್ಕು ಉಲ್ಲಂಘನೆಯಂಥ ಗಂಭೀರ ಪ್ರಕರಣಗಳನ್ನು ಸಾಮಾನ್ಯ ಸೆಕ್ಷನ್ ಅಡಿ ದಾಖಲಿಸಲಾಗುತ್ತದೆ
- ಕಲ್ಲು ತೂರಾಟಗಾರರ ಮೇಲೆ ಭಾರತೀಯ ಸೇನೆ ಅತಿ ಹೆಚ್ಚಿನ ಪ್ರಮಾಣದಲ್ಲಿ ಶಕ್ತಿ ಪ್ರಯೋಗ ಮಾಡುತ್ತಿದೆ. ಇದರಿಂದ ಹಲವು ನಾಗರಿಕರು ಮೃತಪಟ್ಟಿದ್ದಾರೆ
- ಮಕ್ಕಳು ಸಹಿತ ಸಾಮಾನ್ಯ ನಾಗರಿಕರನ್ನು ಬಂಧಿಸಿ, ವಿಚಾರಣೆ ನೆಪದಲ್ಲಿ ಹಿಂಸೆ ನೀಡಲಾಗುತ್ತಿದೆ

**ಪಾಕ್ ಆಕ್ರಮಿತ ಕಾಶ್ಮೀರ**

- ಸಂವಿಧಾನ ಪಾಲನೆ ಹಾಗೂ ಸ್ಥಿರ ಸರ್ಕಾರ ಅಸ್ತಿತ್ವದಲ್ಲಿಲ್ಲ. ಪಾಕಿಸ್ತಾನ ಪ್ರಧಾನಿ ನೇತೃತ್ವದ ಸಮಿತಿ ಪಿಒಕೆ ಹಾಗೂ ಗಿಲ್ಗಿಟ್-ಬಾಲ್ಟಿಸ್ತಾನದಲ್ಲಿ ಆಡಳಿತ ಉಸ್ತುವಾರಿ ನೋಡಿಕೊಳ್ಳುತ್ತಿದೆ. ಪಾಕ್ ಬೇಹುಗಾರಿಕೆ ಸಂಸ್ಥೆ ಐಎಸ್ಐ ಸಿಬ್ಬಂದಿಯನ್ನು ಬಹುತೇಕ ಎಲ್ಲ ಭಾಗಗಳಲ್ಲಿ ನಿಯೋಜಿಸಲಾಗಿದೆ
- ಅಭಿವ್ಯಕ್ತಿ ಸ್ವಾತಂತ್ರ್ಯ ಸಭೆ ಸಮಾರಂಭಗಳನ್ನು ನಡೆಸುವುದು, ಸಾರ್ವಜನಿಕವಾಗಿ ಒಂದೆಡೆ ಸೇರುವ ಅವಕಾಶ ಇಲ್ಲಿನ ವ್ಯಕ್ತಿಗಳಿಗೆ ಇಲ್ಲ
- ತಮ್ಮ ತತ್ವಕ್ಕೆ ವಿರುದ್ಧವಾಗಿರುವ ರಾಜಕೀಯ ಪಕ್ಷಗಳನ್ನು ಸರ್ಕಾರ ನಿರ್ಬಂಧಿಸುತ್ತಿದೆ
- ಮಾಧ್ಯಮಗಳು ವರದಿ ಪ್ರಕಟಿಸಲು ಸರ್ಕಾರದ ಪೂರ್ವಾನುಮತಿ ಪಡೆದುಕೊಳ್ಳಬೇಕು ಭಯೋತ್ಪಾದನಾ ನಿಗ್ರಹ ಕಾಯ್ದೆಯನ್ನು ದುರ್ಬಳಕೆ ಮಾಡಿಕೊಂಡು, ಸಾರ್ವಜನಿಕರ ಮೇಲೆ ದೌರ್ಜನ್ಯ ನಡೆಸಲಾಗುತ್ತಿದೆ
- ಚೀನಾ – ಪಾಕಿಸ್ತಾನ ಕಾರಿಡಾರ್... ಯೋಜನೆ ನೆಪದಲ್ಲಿ ಸ್ಥಳೀಯರಿಗೆ ಸೇರಿದ ಅಪಾರ ಭೂಮಿಯನ್ನು ಕಿತ್ತುಕೊಳ್ಳಲಾಗುತ್ತಿದೆ
- ಇಲ್ಲಿ ಜನರು ತಾವು ಇಚ್ಛಿಸುವ ಧರ್ಮ, ನಂಬಿಕೆಯನ್ನು ಅನುಸರಿಸುವಂತಿಲ್ಲ.

ನಮ್ಮ ಐಎಎಸ್ ಅಕಾಡೆಮಿ
ನಿಮ್ಮೂರಿಂದ..... ಮಸ್ಸೂರಿಗೆ/ಮೈಸೂರಿಗೆ

## 5. 'ಒನ್ ಬೆಲ್ಟ್ ಒನ್ ರೋಡ್' ಬಗ್ಗೆ ಭಾರತದ ನಿಲುವು

### ಪ್ರಮುಖ ಸುದ್ದಿ

- ಷಾಂಘೈ ಸಹಕಾರ ಸಂಘದ (ಎಸ್ಸಿಒ) ಕ್ವಿಂಗ್ಡಾವ್ ಘೋಷಣೆಯಲ್ಲಿ, ಚೀನಾದ "ಒನ್ ಬೆಲ್ಟ್ ಒನ್ ರೋಡ್" (ಒಬಿಒಆರ್)ಯೋಜನೆಯನ್ನು ಭಾರತ ಬೆಂಬಲಿಸುತ್ತಿಲ್ಲ. ಒಬಿಒಆರ್ ಯನ್ನು ಬೆಂಬಲಿಸುವ ದೇಶಗಳ ಅಂತಿಮ ಹೇಳಿಕೆಯಲ್ಲಿ ಭಾರತದ ಹೆಸರನ್ನು ಬಿಟ್ಟು ಬಿಡಲಾಗಿದೆ. ಒಬಿಒಆರ್ ವಿರುದ್ಧದ ಭಾರತದ ಈ ನಿಲುವು ಹೊಸದಲ್ಲ ಬದಲಾಗಿ ಈ ಯೋಜನೆಗೆ ಭಾರತದ ಮೂಲಭೂತ ವಿರೋಧ ಮುಂದುವರಿಕೆಯಾಗಿದೆ. ಆರಂಭದಿಂದಲೂ, ಭಾರತವು ತನ್ನ

ನಿಲುವಿನಲ್ಲಿ ಸ್ಥಿರವಾಗಿದೆ. ಆದರೆ ನವದೆಹಲಿಯು ಒಬಿಒಆರ್ ಬಗ್ಗೆಗಿನ ತನ್ನ ಸಮಸ್ಯೆಗಳ ಬಗ್ಗೆ ಚೀನಾದ ಜೊತೆ ಅರ್ಥಪೂರ್ಣ ಸಂವಾದದಲ್ಲಿ ಚೀನಾವನ್ನುತೊಡಗಿಸಿಕೊಳ್ಳಲು ಸಿದ್ಧವಾಗಿದೆ.

### ಮುಖ್ಯ ಅಂಶಗಳು

- ಒಬಿಒಆರ್ ಬೆಂಬಲಿಸದಿರುವ ಭಾರತದ ನಡೆಗೆ ಅನೇಕ ಪ್ರಮುಖ ಕಾರಣಗಳಿವೆ. ಯಾವುದೇ ಸಂಪರ್ಕ ಯೋಜನೆಯು ಇತರರಾಷ್ಟ್ರಗಳ ಸಾರ್ವಭೌಮತ್ವದ ಮೇಲೆ ಪ್ರಭಾವ ಬೀರಬಾರದು ಎಂಬುದು ಭಾರತದ ದೃಢ ನಿಲುವು. ಚೀನಾ-ಪಾಕಿಸ್ತಾನಆರ್ಥಿಕ ಕಾರಿಡಾರ್ (ಸಿಪಿಇಸಿ),ಯು ಒಬಿಒಆರ್ ಯ ಪ್ರಮುಖ ಯೋಜನೆಯಾಗಿದ್ದು ಪಾಕಿಸ್ತಾನದ ಆಕ್ರಮಿತ ಕಾಶ್ಮೀರ(ಪಿಒಕೆ) ಮೂಲಕ ಕ್ಸಿನ್ಜಿಯಾಂಗ್ನಲ್ಲಿ ಕಾಶ್ಗರ್ ನಗರವನ್ನು ಪಾಕಿಸ್ತಾನದ ಗ್ವಾಡಾರ್ ಬಂದರು ನಗರಕ್ಕೆ ಸಂಪರ್ಕಿಸುತ್ತದೆ.ಭಾರತದ ದೃಷ್ಟಿಕೋನದಲ್ಲಿ,ಪಾಕ್ ಆಕ್ರಮಿತ ಕಾಶ್ಮೀರ ಒಂದು ಸಂವೇದನಾಶೀಲ ಸಮಸ್ಯೆಯಾಗಿದ್ದರೂ, ಭಾರತ ಇದಕ್ಕೆ ವಿರೋಧ ವ್ಯಕ್ತಪಡಿಸಿದರೂ ಈ ಯೋಜನೆಯಲ್ಲಿ ಚೀನಾವು ಸಕ್ರೀಯವಾಗಿ ಭಾಗವಹಿಸುತ್ತಿರುವುದು ಭಾರತದ ಆತಂಕಕ್ಕೆ ಕಾರಣವಾಗಿದೆ. "ಪ್ರಾದೇಶಿಕ ಸಮಗ್ರತೆ ಮತ್ತು ಸಾರ್ವಭೌಮತ್ವದ ಬಗ್ಗೆ ಭಾರತದ ಕಳವಳಗಳಿಗೆ ಚೀನಾವು ಸೊಪ್ಪು ಹಾಕದಿರುವುದು". ಈ ಯೋಜನೆಯಲ್ಲಿ ಅದು ಭಾಗವಹಿಸುವ ಮೂಲಕ ತಿಳಿಯುತ್ತದೆ. ಆದ್ದರಿಂದ ಭಾರತ ಈ ಯೋಜನೆಯನ್ನು ಬೆಂಬಲಿಸುತ್ತಿಲ್ಲ.

- ಚೀನಾದ ಒಬಿಒಆರ್ ಯ ಸ್ವರೂಪದ ಬಗ್ಗೆ ಅದರಲ್ಲೂ ಅದರ ಅನುಷ್ಠಾನದ ಬಗ್ಗೆ ಪಾರದರ್ಶಕತೆ ಕೊರತೆಯಿದೆ ಎಂದು ಭಾರತ ಹೇಳಿದೆ; ಕಾನೂನಿನ ನಿಯಮ ಮತ್ತು ಇತರ ಅಂತಾರಾಷ್ಟ್ರೀಯ ನಿಯಮಗಳಲ್ಲಿ ಪಾರದರ್ಶಕತೆ ಇಲ್ಲ ಎಂಬುದು ಭಾರತದ ಅಭಿಪ್ರಾಯ. ಸಂಪರ್ಕ ಯೋಜನೆಗಳು ಸಮುದಾಯಗಳಿಗೆ ಸಾಲದ ಹೊರೆಗಳನ್ನು ಸೃಷ್ಟಿಸಬಾರದು ಎನ್ನುವುದರ ಬಗ್ಗೆ ಭಾರತ ಖಚಿತ ನಿಲುವು ಹೊಂದಿದೆ. ಒಬಿಒಆರ್ ಯೋಜನೆಗೆ ಚೀನಾದಿಂದ ಪಡೆದ ಸಾಲವನ್ನು ಪಾವತಿಸಲು ದೇಶದಳಿಗೆ ಅಸಾಧ್ಯವಾಗುವ ಸ್ಥಿತಿಯನ್ನು ತಂದೊಡ್ಡಬಲ್ಲದು ಆಗ ಸಾಲ ಮರು ಪಾವತಿಯ ಬದಲಾಗಿ ಆ ದೇಶಗಳ ಪ್ರಮುಖ ಆಯಕಟ್ಟಿನ ಆಸ್ತಿಗಳ ಮಾಲೀಕತ್ವ ಕೈ ತಪ್ಪಿ ಚೀನಾದ

ಪಾಲಾಗಬಹುದು ಎಂಬ ಕಳವಳವನ್ನು ಭಾರತ ಹೊಂದಿದೆ. ಉದಾಹರಣೆಗೆ, ತನ್ನ ಸಾಲವನ್ನು ಮರುಪಾವತಿಸಲು ಚೀನಾ ಮರ್ಚಾಂಟ್ಸ್ ಪೋರ್ಟ್ ಹೋಲ್ಡಿಂಗ್ಸ್ ಗೆ ಶ್ರೀಲಂಕಾ ತನ್ನ ಹ್ಯಾಂಬಂಟೊಟ ಬಂದರನ್ನು 99 ವರ್ಷಗಳ ಗುತ್ತಿಗೆಗೆ ನೀಡುವುದಕ್ಕೆ ಸಹಿ ಹಾಕಿದೆ. ಒಪ್ಪಂದದ ಭಾಗವಾಗಿ, ಬಂದರು ತೆರಿಗೆ ವಿನಾಯಿತಿಯನ್ನು ಪಡೆಯುತ್ತದೆ ಮತ್ತು ಚೀನೀ ಸಂಸ್ಥೆಗಳು 32 ವರ್ಷಗಳ ತೆರಿಗೆ ವಿರಾಮಗಳನ್ನು ಪಡೆಯುತ್ತವೆ. ಬಂದರಿಗೆ ಚೀನಾ 300 ಮಿಲಿಯನ್ ಯುಎಸ್ ಡಾಲರ್ ಪಾವತಿಸುವುದರೊಂದಿಗೆ ಚೀನಾವನ್ನು ಯೋಜನೆಯಲ್ಲಿ ಉಂಟಾದ ಸಾಲಗಳನ್ನು ಪಾವತಿಸಲು ಬಳಸಲಾಗುತ್ತದೆ. ಸಂಪರ್ಕ ಯೋಜನೆಗಳಿಗೆ ಬೆಂಬಲ ನೀಡುವಾಗ ಪರಿಸರ ಮತ್ತು ಪರಿಸರ ರಕ್ಷಣೆ, ಯೋಜನೆಯ ವೆಚ್ಚ ಮತ್ತು ಪಾರದರ್ಶಕ ಮತ್ತು ತಂತ್ರಜ್ಞಾನ ವರ್ಗಾವಣೆಯ ಪಾರದರ್ಶಕ ಮೌಲ್ಯಮಾಪನಗಳನ್ನು ಪರಿಗಣಿಸಬೇಕು ಎಂದು ಭಾರತ ಸ್ಪಷ್ಟಪಡಿಸಿದೆ. ಬೇರೆ ರೀತಿಯಲ್ಲಿ ಹೇಳುವುದಾದರೆ,ಸಂಪರ್ಕ ಯೋಜನೆಗಳು ಎಲ್ಲರಿಗೂ ಆರ್ಥಿಕ ಪ್ರಯೋಜನವನ್ನು ತರುವಂತಹ ಒಂದು ಸಮಂಜಸವಾದ ಮತ್ತು ಸಮತೋಲಿತ ರೀತಿಯಲ್ಲಿ ಇರಬೇಕು. ಹೀಗೆ ಚೀನಾದ ಒಬಿಒಆರ್ ಯೋಜನೆಗಳು ಈ ತತ್ವಗಳನ್ನು ಅನುಸರಿಸುತ್ತವೆಯೇ ಎಂದು ಭಾರತ ಪ್ರಶ್ನಿಸಿದೆ. 2017 ರ ಮೇ 13 ರಂದು ಭಾರತ ಯಾವುದೇ ಸಂಪರ್ಕ ಯೋಜನೆಗೆ ವಿಶಾಲ ತತ್ವಗಳಡಿ ಬೆಂಬಲ ನೀಡುವುದಾಗಿ ಭಾರತ ಸ್ಪಷ್ಟಪಡಿಸಿದೆ.

ನಮ್ಮ ಐಎಎಸ್ ಅಕಾಡೆಮಿ
ನಿಮ್ಮೂರಿಂದ..... ಮಸ್ಸೂರಿಗೆ/ಮೈಸೂರಿಗೆ

- ರಾಷ್ಟ್ರಗಳಿಗೆ ಒಬಿಒಆರ್ ನ ಪ್ರಯೋಜನವನ್ನು ಮನವೊಲಿಸಲು ಚೀನಾವು ಅದರ ಮೃದು ಶಕ್ತಿಯನ್ನು ಪರಿಣಾಮಕಾರಿಯಾಗಿ ಬಳಸುತ್ತಿದೆ. ಆದೇಶಗಳಲ್ಲಿನ ಮೂಲಸೌಕರ್ಯ ಯೋಜನೆಳಿಗೆ ಪೂರಕವಾಗಿ ಅನೇಕ ಭರವಸೆಗಳನ್ನು ನೀಡಲಾಗುತ್ತಿದೆ. ಉತ್ತಮ ಗುಣಮಟ್ಟದ ಮೂಲಸೌಕರ್ಯ,ಉದ್ಯೋಗಗಳು, ಸ್ಥಗಿತಗೊಂಡಿರುವ ಆರ್ಥಿಕತೆಗಳನ್ನು ಪುನರುಜ್ಜೀವನಗೊಳಿಸಲು ಮತ್ತು ಸಮುದಾಯಗಳಿಗೆ ಪ್ರಯೋಜನಗಳನ್ನು ಪಡೆದುಕೊಳ್ಳುವ ಆಮಿಷಗಳನ್ನು ಒಡ್ಡಲಾಗುತ್ತದೆ. ಆದಾಗ್ಯೂ, ಮ್ಯಾನ್ಮಾರ್, ಪಾಕಿಸ್ತಾನ ಮತ್ತು ಶ್ರೀಲಂಕಾ ಮುಂತಾದ ಅನೇಕ ದೇಶಗಳಲ್ಲಿ, ಸ್ಥಳೀಯ ಸಮುದಾಯಗಳುತಮ್ಮ ಜೀವನಾಧಾರದ ಮೇಲೆ ಈ ಯೋಜನೆಗಳ ಪ್ರಭಾವದ ವಿರುದ್ಧ ಪ್ರತಿಭಟಿಸಿದ್ದು ಅನೇಕ ಸವಾಲುಗಳನ್ನು ಎದುರಿಸುತ್ತಿದೆ. ಮ್ಯಾನ್ಮಾರ್ ನಲ್ಲಿಕೆಲವು ಯೋಜನೆಗಳು ಪರಿಸರದ ಪ್ರಭಾವದಿಂದಾಗಿ ಟೀಕೆಗೆ ಒಳಗಾಗಿದ್ದವು. ಪಾಕಿಸ್ತಾನದಲ್ಲಿ, ಸ್ಥಳೀಯ ಸಮುದಾಯಗಳು ಈ ಯೋಜನೆಗಳಿಂದಸಾಮಾನ್ಯ ಜನರಿಗೆ ಏನು

ಪ್ರಯೋಜನ ಎಂದು ಪ್ರಶ್ನಿಸಿದ್ದಾರೆ. ಬಲೂಚಿಸ್ತಾನ್ ನಲ್ಲಿನ ಭ್ರಷ್ಟಾಚಾರಕ್ಕಾಗಿ ಒಬಿಆರ್ ತರಲಾಗುತ್ತಿದೆ ಎಂದು ಆಪಾದಿಸಲಾಗುತ್ತಿದೆ. ಈ ನಿಟ್ಟಿನಲ್ಲಿ, ಭಾರತ ಹೊರತಂದ ಪ್ರಶ್ನೆಗಳನ್ನು ಮಾನ್ಯ ಮತ್ತು ಸಕಾಲಿಕ.

- ಕಠಿಣ ಪ್ರಶ್ನೆಗಳನ್ನು ಕೇಳಲು ದೇಶಗಳು ಹಿಂಜರಿಯದಿರಬೇಕೆಂದು ಭಾರತದ ಮೂಲಭೂತ ನಿಲುವು ತೋರಿಸುತ್ತದೆ. ಅಂತಹ ಒಂದು ನಿಲುವುಚೀನಿಯರ ಉಪಕ್ರಮಗಳಿಗೆ ವಿರೋಧವಲ್ಲ ಆದರೆ ಚೀನಾವನ್ನು ರಚನಾತ್ಮಕವಾಗಿ ತೊಡಗಿಸಿಕೊಳ್ಳಲು ಮತ್ತು 'ಒನ್ ಬೆಲ್ಟ್ ಒನ್ ರೋಡ್'ಯೋಜನೆಯನ್ನು ಒಳಗೊಂಡಿರುವ ಎಲ್ಲ ದೇಶಗಳಿಗೆ ಬಳಕೆಯಾಗುತ್ತಿದೆ. ಎಸ್ಸಿಒ ನಲ್ಲಿ ಒಬಿಒಆರ್ ಅನ್ನು ಬೆಂಬಲಿಸಲು ಭಾರತದ ನಿರಾಕರಣೆಯು ಒಬಿಒಆರ್ ಕುರಿತು ಈ ವ್ಯಾಪಕ ಕಾಳಜಿಯನ್ನು ಮತ್ತು ಸಮುದಾಯಗಳು, ಜನರು ಮತ್ತು ದೇಶಗಳಲ್ಲಿ ತರುವಂತಹ ರೀತಿಯ ಪ್ರಭಾವವನ್ನುಪ್ರತಿಬಿಂಬಿಸುತ್ತದೆ. ಹೀಗಾಗಿ, ಭಾರತ ಮತ್ತು ಚೀನಾ ಪರಸ್ಪರ ಯೋಜನೆಗಳನ್ನು ಹೆಚ್ಚು ಸ್ಪಷ್ಟತೆ ತರಲು ಪರಸ್ಪರ ಕೆಲಸ ಮಾಡಬಹುದು ಮತ್ತುಇದರಿಂದಾಗಿ ಇತರ ರಾಷ್ಟ್ರಗಳಿಗೆ ಒಬಿಒಆರ್ ನಂತಹ ಯೋಜನೆಗಳನ್ನು ಆಯ್ಕೆ ಮಾಡುವಲ್ಲಿ ತಿಳುವಳಿಕೆಯ ಆಯ್ಕೆಗಳನ್ನು ಒದಗಿಸುತ್ತವೆ.

ನಮ್ಮ ಐಎಎಸ್ ಅಕಾಡೆಮಿ
ನಿಮ್ಮೂರಿಂದ..... ಮಸ್ಸೂರಿಗೆ/ಮೈಸೂರಿಗೆ

**ECONOMY**

**1.ಅಂಚೆ ಇಲಾಖೆಯ ಗ್ರಾಮೀಣ ದಾಕ್ ಸೇವಕರ ವೇತನ ಮತ್ತು ಭತ್ಯೆ ಪರಿಷ್ಕರಣೆಗೆ ಸಂಪುಟ ಅನುಮೋದನೆ**

ಪ್ರಮುಖ ಸುದ್ದಿ

➢ ಪ್ರಧಾನಮಂತ್ರಿ ಶ್ರೀ ನರೇಂದ್ರ ಮೋದಿ ಅಧ್ಯಕ್ಷತೆಯಲ್ಲಿಂದು ನಡೆದ ಕೇಂದ್ರ ಸಂಪುಟ ಸಭೆಯಲ್ಲಿ ಅಂಚೆ ಇಲಾಖೆಯ ಗ್ರಾಮೀಣ ದಾಕ್ ಸೇವಕರ(ಜಿಡಿಎಸ್) ವೇತನ ಮತ್ತು ಭತ್ಯೆ ಪರಿಷ್ಕರಣೆಗೆ ಅನುಮೋದನೆ ನೀಡಿತು. ಈ ವೇತನ ಪರಷ್ಕರಣೆಯಿಂದಾಗಿ ಒಟ್ಟಾರೆ 2018-19ನೇ ಸಾಲಿನಲ್ಲಿ ರೂ. 1257.75 ಕೋಟಿ ಆರ್ಥಿಕ ಹೊರೆ ಬೀಳಲಿದೆ.(ಇದರಲ್ಲಿ ರೂ. 860.95 ಕೋಟಿ ಮರುಪಾವತಿಸುವ ವೆಚ್ಚ ಮತ್ತು ರೂ. 396.80 ಕೋಟಿ ಪಾವತಿಸುವ ವೆಚ್ಚ ಸೇರಿದೆ).

## ಮುಖ್ಯ ಅಂಶಗಳು

➢ ಸಮಯಾಧಾರಿತ ನಿರಂತರ ಸೇವಾ ಭತ್ಯೆ(ಟಿ ಆರ್ ಸಿ ಎ) ವ್ಯವಸ್ಥೆ ಮತ್ತು ಸ್ಲ್ಯಾಬ್ ಗಳನ್ನು ಏಕರೂಪಗೊಳಿಸಲಾಗಿದೆ. ಒಟ್ಟಾರೆ ಗ್ರಾಮೀಣ ದಕ್ಸೇವಕರನ್ನು ಎರಡು ವಿಭಾಗಗಳಾಗಿ ವಿಂಗಡಿಸಲಾಗಿದೆ. ಉದಾಹರಣೆಗೆ ಶಾಖಾ ಅಂಚೆ ಮುಖ್ಯಸ್ಥರು(ಬಿಪಿಎಂ) ಮತ್ತು ಶಾಖಾ ಅಂಚೆ ಮುಖ್ಯಸ್ಥರನ್ನುಹೊರತುಪಡಿಸಿದಂತೆ ಸಹಾಯಕ ಶಾಖಾ ಅಂಚೆ ಮುಖ್ಯಸ್ಥರು(ಎಬಿಪಿಎಂಎಸ್)

➢ ಪ್ರಸ್ತುತ 11 ಟಿ ಆರ್ ಸಿ ಎ ಸ್ಲ್ಯಾಬ್ ಗಳಿದ್ದು, ಅವು ಕೇವಲ ಮೂರು ಸ್ಲ್ಯಾಬ್ ಗಳಲ್ಲಿ ವಿಲೀನಗೊಳ್ಳಲಿವೆ. ಬಿಪಿಎಂ ಹಾಗೂ ಬಿಪಿಎಂಯೇತರ ವಿಭಾಗಗಳಲ್ಲಿ ತಲಾ ಎರಡು ಹಂತಗಳಾಗಲಿವೆ.

## ಅನುಷ್ಠಾನ ಕಾರ್ಯತಂತ್ರ ಮತ್ತು ಗುರಿ :-

- ಈ ವೇತನ ಪರಿಷ್ಕರಣೆಯ ಪರಿಣಾಮ ಗ್ರಾಮೀಣ ದಾಕ್ ಸೇವಕರ ವೇತನ, ಭತ್ಯೆಗಳು ಸುಧಾರಣೆಯಾಗಿ ಅವರು ಗ್ರಾಮೀಣ ಭಾಗದಲ್ಲಿ ಪರಿಣಾಮಕಾರಿಮತ್ತು ಕಡಿಮೆ ಖರ್ಚಿನಲ್ಲಿ ಮೂಲ ಅಂಚೆ ಸೇವೆಗಳನ್ನು ನೀಡಲು ಸಾಧ್ಯವಾಗುತ್ತದೆ. ಉದ್ದೇಶಿತ ವೇತನ ಪರಿಷ್ಕರಣೆಯಿಂದಾಗಿ ಸೇವಕರ ಸಾಮಾಜಿಕ ಮತ್ತು ಆರ್ಥಿಕ ಸ್ಥಿತಿಗತಿ ಸುಧಾರಣೆಯಾಗಲಿದೆ.

ಪರಿಣಾಮ :-

- ಗ್ರಾಮಗಳಲ್ಲಿನ ಶಾಖಾ ಅಂಚೆ ಕಚೇರಿಗಳು ಸಂವಹನ ಮತ್ತು ಹಣಕಾಸು ಸೇವೆಗಳನ್ನು ಒದಗಿಸುತ್ತಿದ್ದು, ಅವುಗಳು ಬಹುತೇಕ ಗುಡ್ಡಗಾಡುಪ್ರದೇಶಗಳಲ್ಲಿ ಇರುತ್ತದೆ. ಅಂಚೆ ಮಾಸ್ಟರ್ ಸಾಕಷ್ಟು ಕೆಲಸಗಳನ್ನು ಮಾಡಬೇಕಾಗಿದ್ದು, ಗ್ರಾಹಕರಿಗೆ ಅಗತ್ಯ ಪಾವತಿಗಳನ್ನು ಮಾಡಬೇಕಿದೆ. ಆದ್ದರಿಂದ ಅವರಕೆಲಸದ ಮೇಲೆ ಈಗಾಗಲೇ ಅವರಿಗೆ ಹೊಣೆಗಾರಿಕೆ ಹೊರಿಸಲಾಗಿದೆ.
- ಹೆಚ್ಚಿನ ವೇತನ ಅವರ ಮೇಲೆ ಇನ್ನಷ್ಟು ಜವಾಬ್ದಾರಿಯನ್ನು ಹೆಚ್ಚಿಸಲಿದೆ. ಅಲ್ಲದೆ ಭಾರತೀಯ ಅಂಚೆ ಪಾವತಿ ಬ್ಯಾಂಕ್ (ಐಪಿಪಿಬಿ) ಆರಂಭವಾಗಿರುವುದರಿಂದ ಸಂಪರ್ಕಜಾಲದಲ್ಲಿ ಗ್ರಾಮೀಣ ಭಾಗದ ಜನತೆಗೆ ಹಣಕಾಸಿನ ಸೇವೆಗಳನ್ನುಒದಗಿಸುವಲ್ಲಿ ಅದು ಅತ್ಯಂತ ಪ್ರಮುಖ ಪಾತ್ರವನ್ನು ವಹಿಸುತ್ತದೆ.

IAS/KAS
ನಮ್ಮ ಐಎಎಸ್ ಅಕಾಡೆಮಿ
ನಿಮ್ಮೂರಿಂದ..... ಮಸ್ಸೂರಿಗೆ/ಮೈಸೂರಿಗೆ

ಹಿನ್ನೆಲೆ :-

- ಗ್ರಾಮೀಣ ಪ್ರದೇಶದಲ್ಲಿ ಪರಿಣಾಮಕಾರಿ ಅಂಚೆ ಸೇವೆಗಳನ್ನು ಒದಗಿಸುವ ಜತೆಗೆ ಮೂಲ ಹಣಕಾಸು ಸೇವೆಗಳನ್ನು ಒದಗಿಸುವ ಅಂಚೆ ಇಲಾಖೆ ಸುಮಾರು 150 ವರ್ಷಗಳ ಹಿಂದೆ ಸ್ಥಾಪನೆಯಾಯಿತು. ಅದಕ್ಕೆ ಪೂರಕವಾಗಿ ಪೂರ್ಣಾವಧಿ ಸಿಬ್ಬಂದಿಯನ್ನು ಬಳಸಿಕೊಳ್ಳಲಾಗದೆ, ಹೆಚ್ಚುವರಿಯಾಗಿ ಈಇಲಾಖೆಯನ್ನು ಸೃಷ್ಟಿಸಲಾಯಿತು. ಒಂದು ಲಕ್ಷದ 29 ಸಾವಿರದ 346 ಹೆಚ್ಚುವರಿ ಅಂಚೆ ಶಾಖೆಗಳನ್ನು ಪ್ರಾಥಮಿಕವಾಗಿ ಗ್ರಾಮೀಣ ದಾಕ್ ಸೇವಕ ಶಾಖೆ ಅಂಚೆಮಾಸ್ಟರ್ ಎಂದು ಗುರುತಿಸಲಾಗಿತ್ತು.
- ಇದರ ಜತೆಗೆ ಶಾಖೆ, ಉಪಶಾಖೆ ಮತ್ತು ಮುಖ್ಯ ಕೇಂದ್ರ ಕಚೇರಿಗಳಲ್ಲಿ ಕೆಲಸ ಮಾಡಲೂ ಸಹ ಗ್ರಾಮೀಣ ದಾಕ್ ಸೇವಕರನ್ನು ಬಳಸಿಕೊಳ್ಳಲಾಯಿತು. ಈ ಗ್ರಾಮೀಣ

ದಾಕ್ ಸೇವಕರು ಪ್ರಮುಖವಾಗಿ ಪಾರ್ಟ್ ಟೈಮ್ ಅಂದರೆ ಅರೆಕಾಲಿಕವಾಗಿ ಪ್ರತಿ ದಿನ 3 ರಿಂದ 5ಗಂಟೆಗಳ ಕಾಲ ಕೆಲಸ ಮಾಡುತ್ತಾರೆ. ಇದು ಅವರಿಗೆ ಮತ್ತು ಅವರ ಕುಟುಂಬದ ಜೀವನೋಪಾಯಕ್ಕೆ ಹೆಚ್ಚುವರಿ ಆದಾಯದ ಮೂಲವಾಗಿದೆ. ದಾಕ್ ಸೇವಕರ ಸೇವಾ ಅವಧಿ 65 ವರ್ಷಗಳ ವರೆಗೆ ಇರುತ್ತದೆ.

## 2. ಸಮುದಾಯ ಸಹಭಾಗಿತ್ವದ ಸ್ವಜಲ ಯೋಜನೆ

### ಪ್ರಮುಖ ಸುದ್ದಿ

- ಕೇಂದ್ರ ಸರ್ಕಾರ ಇತ್ತೀಚೆಗೆ ರಾಷ್ಟದ 115 ಜಿಲ್ಲೆಗಳಲ್ಲಿ ಸ್ವಜಲ ಯೋಜನೆಗೆ ಚಾಲನೆ ನೀಡಿದೆ. ರಾಷ್ಟ್ರೀಯ ಗ್ರಾಮೀಣ ಕುಡಿಯುವ ನೀರು ಕಾರ್ಯಕ್ರಮದಡಿ (NRDWP) ಬಜೆಟ್‌ನಲ್ಲೇ ಈ ಯೋಜನೆಗೆ ಅಂದಾಜು 700 ಕೋಟಿ ರೂಪಾಯಿ ಅನುದಾನ ಒದಗಿಸಲಾಗುತ್ತಿದೆ.

ನಮ್ಮ ಐಎಎಸ್ ಅಕಾಡೆಮಿ
ನಿಮ್ಮೂರಿಂದ..... ಮಸ್ಸೂರಿಗೆ/ಮೈಸೂರಿಗೆ

### ಮುಖ್ಯ ಅಂಶಗಳು

- ಸ್ವಜಲ ಯೋಜನೆಯು ಕುಡಿಯುವ ನೀರು ಒದಗಿಸುವ ನಿಟ್ಟಿನಲ್ಲಿ ಸಮುದಾಯ ಸಹಭಾಗಿತ್ವದ ಕಾರ್ಯಕ್ರಮವಾಗಿದೆ. ಈ ಯೋಜನೆಯಡಿ ಸರ್ಕಾರವು ಶೇ.90 ಯೋಜನಾ ವೆಚ್ಚ ಭರಿಸಲಿದೆ. ಯೋಜನೆ ಅನುಷ್ಠಾನಗೊಳ್ಳುತ್ತಿರುವ ಗ್ರಾಮದ ಜನರಿಂದ ಶೇ.10 ಯೋಜನಾ ವೆಚ್ಚವನ್ನು ಸಂಗ್ರಹಿಸಲಾಗುತ್ತದೆ. ಕುಡಿಯುವ ನೀರಿನ ಸರಬರಾಜು ಮತ್ತು ಯೋಜನೆಯ ನಿರ್ವಹಣೆಯನ್ನು ಸ್ಥಳೀಯ ಗ್ರಾಮಸ್ಥರು ಮಾಡಲಿದ್ದಾರೆ.

- NRDWP ಅನ್ನು 2009ರಲ್ಲಿ ಆರಂಭಿಸಲಾಗಿದೆ. ಕುಡಿಯಲು ಯೋಗ್ಯವಾದ, ಅಗತ್ಯ ಪ್ರಮಾಣದ ಮತ್ತು ಸರಬರಾಜು ಮಾಡಲು ಅನುಕೂಲವಾದ ವ್ಯವಸ್ಥೆ ಎಂಬ ಅಂಶಗಳನ್ನು ಆಧರಿಸಿ,

ಕುಡಿಯುವ ನೀರಿನ ಮೂಲದ ಸಂರಕ್ಷಣೆ ಮಾಡುವುದು ಈ ಯೋಜನೆಯ ಉದ್ದೇಶವಾಗಿದೆ. NRDWP ಒಂದು ಕೇಂದ್ರ ಸರ್ಕಾರದ ಪ್ರಾಯೋಜಿತ ಯೋಜನೆಯಾಗಿದೆ. ಕೇಂದ್ರ ಮತ್ತು ರಾಜ್ಯ ಸರ್ಕಾರಗಳು ಶೇ.50 ಅನುಪಾತದಲ್ಲಿ ಯೋಜನಾ ವೆಚ್ಚವನ್ನು ಭರಿಸುತ್ತವೆ.

**3. ನಷ್ಟ / ಸಂಕಷ್ಟದಲ್ಲಿರುವ ಸಾರ್ವಜನಿಕ ವಲಯದ ಉದ್ದಿಮೆಗಳನ್ನು ಕಾಲಮಿತಿಯಲ್ಲಿ ಮುಚ್ಚುವ ಮತ್ತು ಅವುಗಳ ಸ್ಥಿರ ಮತ್ತು ಚರಾಸ್ಥಿ ವಿಲೇವಾರಿ ಮಾಡುವ ಪರಿಷ್ಕೃತ ಮಾರ್ಗಸೂಚಿಗೆ ಕೇಂದ್ರ ಸಂಪುಟ ಅನುಮೋದನೆ**

ಪ್ರಮುಖ ಸುದ್ದಿ

- ಪ್ರಧಾನಮಂತ್ರಿ ಶ್ರೀ ನರೇಂದ್ರ ಮೋದಿ ಅವರ ಅಧ್ಯಕ್ಷತೆಯಲ್ಲಿ ಇಂದು ನಡೆದ ಕೇಂದ್ರ ಸಚಿವ ಸಂಪುಟ ಸಭೆಯಲ್ಲಿ ಸಾರ್ವಜನಿಕ ವಲಯದ ಉದ್ದಿಮೆಗಳ ಇಲಾಖೆಗೆ ಸೇರಿದ ನಷ್ಟ / ಸಂಕಷ್ಟದಲ್ಲಿರುವ ಸಾರ್ವಜನಿಕ ವಲಯದ ಉದ್ದಿಮೆಗಳನ್ನು ಕಾಲಮಿತಿಯಲ್ಲಿ ಮುಚ್ಚುವ ಮತ್ತು ಅವುಗಳ ಸ್ಥಿರ ಮತ್ತು ಚರಾಸ್ಥಿ ವಿಲೇವಾರಿ ಮಾಡುವ ಪರಿಷ್ಕೃತ ಮಾರ್ಗಸೂಚಿಗೆ ಕೇಂದ್ರ ಸಂಪುಟ ಅನುಮೋದನೆ ನೀಡಿತು. ಈ ಪರಿಷ್ಕೃತ ಮಾರ್ಗಸೂಚಿಯಿಂದಾಗಿ ನಷ್ಟ ಮತ್ತು ಸಂಕಷ್ಟದಲ್ಲಿರುವ ಸಾರ್ವಜನಿಕ ವಲಯದ ಉದ್ದಿಮೆಗಳನ್ನು ಮುಚ್ಚುವ ಯೋಜನೆ ಅನುಷ್ಠಾನದಲ್ಲಿನ ವಿಳಂಬ ತಗ್ಗಲಿದೆ. ಈ ಪರಿಷ್ಕೃತ ಮಾರ್ಗಸೂಚಿ ಹಿಂದೆ 2016ರ ಸೆಪ್ಟೆಂಬರ್ ನಲ್ಲಿ ಸಾರ್ವಜನಿಕ ವಲಯದ ಉದ್ದಿಮೆಗಳ ಇಲಾಖೆ ಹೊರಡಿಸಿದ್ದ ಮಾರ್ಗಸೂಚಿಗಳ ಬದಲಿಗೆ ಜಾರಿಗೆ ಬರಲಿದೆ.

ಮುಖ್ಯ ಅಂಶಗಳು

- ಈ ಹೊಸ ಮಾರ್ಗಸೂಚಿ ಅನ್ವಯ ಸಾರ್ವಜನಿಕ ವಲಯದ ಉದ್ದಿಮೆಗಳನ್ನು ಮುಚ್ಚುವ ಪ್ರಕ್ರಿಯೆಯನ್ನು ತ್ವರಿತವಾಗಿ ಪೂರ್ಣಗೊಳಿಸಲು ವಿಸ್ತೃತ ಚೌಕಟ್ಟನ್ನು ಹಾಕಿಕೊಡುವುದಲ್ಲದೆ, ಆ ಪ್ರಕ್ರಿಯೆಗೆ ನಿಗದಿತ ಕಾಲಮಿತಿ ಒದಗಿಸುವುದರ ಜತೆಗೆ ಸಂಬಂಧಿಸಿದ ಸಚಿವಾಲಯಗಳು, ಇಲಾಖೆಗಳು ಮತ್ತು ಸಿಪಿಎಸ್ಇಗಳಿಗೆ ಹೊಣೆಗಾರಿಕೆ ನೀಡಲಾಗುವುದು.
- ಮಾರ್ಗಸೂಚಿ ಅನ್ವಯ ಸಚಿವಾಲಯ, ಇಲಾಖೆ ಅಥವಾ ಸಿಪಿಎಸ್ಇಗಳು ಪೂರ್ವಭಾವಿ ಕ್ರಮಗಳನ್ನು ಅಂದರೆ ಮುಚ್ಚುವ ಪ್ರಸ್ತಾವಕ್ಕೆ ತಯಾರಿ, ಸಾಂಸ್ಥಿಕ ಮತ್ತು ಇತರೆ ಹೊಣೆಗಾರಿಕೆಗಳ ಇತ್ಯರ್ಥ ಮತ್ತು ಕಾಲಮಿತಿಯಲ್ಲಿ ಸಿಪಿಎಸ್ಇಗಳ ಸ್ಥಿರ ಮತ್ತು ಚರಾಸ್ಥಿಗಳನ್ನು ವಿಲೇವಾರಿ ಮಾಡುವ ಪ್ರಕ್ರಿಯೆಗಳನ್ನು ಕೈಗೊಳ್ಳಬಹುದಾಗಿದೆ.

- ಮಾರ್ಗಸೂಚಿ ಅನ್ವಯ ಸಿಪಿಎಸ್ಇಗಳು ವಸತಿ ಮತ್ತು ನಗರಾಭಿವೃದ್ಧಿ ವ್ಯವಹಾರಗಳ ಸಚಿವಾಲಯ ಹೊರಡಿಸಿರುವ ಕೈಗೆಟಕುವ ದರದಲ್ಲಿ ವಸತಿ ಸೌಕರ್ಯ ಯೋಜನೆಗಳನ್ನು ಕೈಗೆತ್ತಿಕೊಳ್ಳಲು ಸಿಪಿಎಸ್ಇಗಳ ಭೂಮಿ ಬಳಕೆಗೆ ಮೊದಲ ಆದ್ಯತೆ ನೀಡಬೇಕಾಗಿದೆ. ಈ ಸಿಪಿಎಸ್ಇಗಳಲ್ಲಿ ಕಾರ್ಯನಿರ್ವಹಿಸುತ್ತಿರುವ ಸಿಬ್ಬಂದಿಗಳಿಗೆ ಸಂಸ್ಥೆಗಳನ್ನು ಮುಚ್ಚುವುದರಿಂದ ತೊಂದರೆಯಾಗಬಾರದು ಎಂದು ಸರ್ಕಾರ ನಿರ್ಧರಿಸಿರುವುದರಿಂದ ಯಾವ ಸಿಬ್ಬಂದಿ ಕಾರ್ಯ ನಿರ್ವಹಿಸುತ್ತಿದ್ದಾರೋ ಅಂತಹರಿಗೆ 2007ರ ರಾಷ್ಟ್ರೀಯ ವೇತನಶ್ರೇಣಿಯಂತೆ ಎಲ್ಲ ಸಿಬ್ಬಂದಿಗೂ ಏಕರೂಪದ ಸ್ವಯಂ ನಿವೃತ್ತಿ ಯೋಜನೆ(ವಿಆರ್ಎಸ್) ಸೌಲಭ್ಯ ಕಲ್ಪಿಸುವುದು.

- ಈ ಮಾರ್ಗಸೂಚಿಗಳು ಎಲ್ಲ ಸಂಕಷ್ಟ ಮತ್ತು ನಷ್ಟದಲ್ಲಿರುವ ಸಾರ್ವಜನಿಕ ವಲಯದ ಉದ್ದಿಮೆಗಳಿಗೆ ಅನ್ವಯವಾಗುತ್ತದೆ. ಅವೆಂದರೆ

  - ಸಂಪುಟ / ಆರ್ಥಿಕ ವ್ಯವಹಾರಗಳ ಕುರಿತಾದ ಸಂಪುಟ ಸಮಿತಿ / ಸಂಬಂಧಿಸಿದ ಸಚಿವಾಲಯಗಳಿಂದ ಸಂಸ್ಥೆಗಳನ್ನು ಮುಚ್ಚಲು ಅನುಮೋದನೆ ಅಥವಾ ತಾತ್ವಿಕ ಅನುಮೋದನೆ ಪಡೆದಿರಬೇಕು.

· ಸಚಿವಾಲಯ ಅಥವಾ ಇಲಾಖೆ ಸಿಪಿಎಸ್ಇ ಕಂಪನಿಯನ್ನು ಮುಚ್ಚಲು ಆಡಳಿತಾತ್ಮಕ ಅನುಮೋದನೆ ನೀಡಿದ ನಂತರ ಸಕ್ಷಮ ಪ್ರಾಧಿಕಾರದಿಂದ ಅನುಮೋದನೆ ಪಡೆಯುವ ಪ್ರಕ್ರಿಯೆಯಲ್ಲಿ ತೊಡಗಿರುವ ಸಂಸ್ಥೆಗಳು.

➢ ಕೇಂದ್ರ ವಸತಿ ಮತ್ತು ನಗರಾಭಿವೃದ್ಧಿ ವ್ಯವಹಾರಗಳ ಸಚಿವಾಲಯ ನಿರ್ವಹಣೆ ಮಾಡುತ್ತಿರುವ ಸರ್ಕಾರದ ಮಹತ್ವಾಕಾಂಕ್ಷೆಯ ಕೈಗಟಕುವ ದರದಲ್ಲಿ ವಸತಿ ಯೋಜನೆ ಅನುಷ್ಠಾನಕ್ಕೆ ಮುಚ್ಚಲು ನಿರ್ಧರಿಸಿರುವ ಸಂಕಷ್ಟ ಮತ್ತು ನಷ್ಟದಲ್ಲಿರುವ ಸಾರ್ವಜನಿಕ ವಲಯದ ಉದ್ದಿಮೆಗಳ ಲಭ್ಯವಿರುವ ಭೂಮಿಯನ್ನು ಬಳಸಿಕೊಳ್ಳಲು ಆದ್ಯತೆ ನೀಡಬೇಕಾಗಿದೆ.

## 4. ಭಾರತದ ಸಕ್ಕರೆ ಉದ್ದಿಮೆಗೆ ಪ್ಯಾಕೇಜ್

### ಪ್ರಮುಖ ಸುದ್ದಿ

➢ ಭಾರತೀಯ ಸಕ್ಕರೆ ಉದ್ಯಮವು ಬೆಳೆಗಾರರಿಗೆ ಕಬ್ಬಿನ ಬಾಕಿ ಪಾವತಿಯ ಬೃಹತ್ ಸಮಸ್ಯೆ ಹಾಗು ಹೆಚ್ಚುತ್ತಿರುವ ಹೆಚ್ಚುವರಿ ಸಕ್ಕರೆಯ ಉತ್ಪಾದನೆಯನ್ನು ಹೊರೆಯನ್ನು ಎದುರಿಸುತ್ತಿದೆ. ಈ ಸಮಸ್ಯೆಗೆ ಇತ್ತೀಚೆಗೆ ದೊಡ್ಡ ಪರಿಹಾರವನ್ನು ಒದಗಿಸಲಾಗಿದೆ. ಕೈಗಾರಿಕಾ ಮತ್ತು ಕಬ್ಬು ಬೆಳೆಗಾರರಿಗೆ ಸಹಾಯ ಮಾಡುವ ಉದ್ದೇಶದಿಂದ ಕೇಂದ್ರ ಸಚಿವ ಸಂಪುಟ ೭,೦೦೦ ಕೋಟಿ ರೂ ಗಳ ಸಮಗ್ರ 'ಸಕ್ಕರೆ ಪ್ಯಾಕೇಜ್' ಅನ್ನು ಘೋಷಿಸಿದೆ.

➢ ಗ್ರಾಮೀಣ ಭಾರತದ ಈ ಪ್ರಮುಖ ಉದ್ಯಮದ ಕುಸಿತದ ಸಮಸ್ಯೆಗಳನ್ನು ನಿವಾರಿಸಲು ಇದು ಮೂರು ಪ್ರಮುಖ ಘಟಕಗಳನ್ನು ಹೊಂದಿದೆ. ಬಾಕಿ ಪಾವತಿಗಳಿಗೆ ಸಹಾಯ ಮಾಡಲು ಕಬ್ಬು ರೈತರಿಗೆ 22,000 ಕೋಟಿ ರೂ ನೀಡುವುದು ಇದರ ಪ್ರಾಥಮಿಕ ಆಶಯ.

### ಮುಖ್ಯ ಅಂಶಗಳು

- ಕೇಂದ್ರ ಸರಕಾರ ಮೂರು ಮಿಲಿಯನ್ ಟನ್ ಗಳಷ್ಟು ಸಕ್ಕರೆ ಬಫರ್ ಸ್ಟಾಕ್ ಅನ್ನು ರೂ. 1,175 ಕೋಟಿ ರೂ. ವೆಚ್ಚದಲ್ಲಿ ನಿರ್ಮಿಸಲು ಮುಂದಾಗಿದೆ.. ಸಕ್ಕರೆ ಗಿರಣಿಗಳ ಪರವಾಗಿ ರೈತರ ಬ್ಯಾಂಕ್ ಖಾತೆಗಳಿಗೆ ಸರಕಾರವು ನೇರವಾಗಿ ಉಳಿದಿರುವ ಬಾಕಿಗಳನ್ನು ವಿತರಿಸಲಿದೆ.
- ದೇಶದ ಸಕ್ಕರೆ ಉತ್ಪಾದನೆಯು ಸುಮಾರು 31 ಮಿಲಿಯನ್ ಟನ್ ಗಳಷ್ಟಿದೆ ಎಂದು ಅಂದಾಜಿಸಲಾಗಿದೆ; 2017-18ರ ಪ್ರಸಕ್ತ ಋತುವಿನ (ಅಕ್ಟೋಬರ್-ಸೆಪ್ಟೆಂಬರ್) ಸುಮಾರು 4 ಮಿಲಿಯನ್ ಟನ್ ಗಳಷ್ಟು ಸಕ್ಕರೆ ಅಗತ್ಯವಿದ್ದು 10 ಮಿಲಿಯನ್ ಟನ್ ಗಳಷ್ಟು ಸಕ್ಕರೆ ಉತ್ಪಾದನೆ ಆಗಬಹುದು ಎಂದು ಅಂದಾಜಿಸಲಾಗಿದೆ.

- ಕೇವಲ ಒಂದು ತಿಂಗಳ ಹಿಂದೆ ಕೇಂದ್ರ ಕ್ಯಾಬಿನೆಟ್ ಅರೆದ ಕಬ್ಬಿಗೆ ಪ್ರತಿ ಕ್ವಿಂಟಾಲ್ ಗೆ 5.50 ರೂ ಹಣಕಾಸು ನೆರವು ನೀಡುವುದಾಗಿ ಘೋಷಿಸಿತ್ತು. ಇದಕ್ಕಾಗಿ 1,500 ಕೋಟಿ ರೂ ನೀಡುವ ಭರವಸೆ ನೀಡಿದೆ. ರೈತರಿಗೆ ಬಾಕಿ ಇರುವ ಪಾವತಿಗಾಗಿ ಇದನ್ನು ವಿನಿಯೋಗಿಸಬೇಕು ಎಂದು ಹೇಳಲಾಗಿದೆ

- ಸಕ್ಕರೆ ಬೆಲೆಯಲ್ಲಿನ ಕುಸಿತವನ್ನು ತಡೆಯಲು ಮತ್ತು ಸಕ್ಕರೆ ಗಿರಣಿಗಳ ಸ್ಥಿತಿಯನ್ನು ಸುಧಾರಿಸಲು ಸಕ್ಕರೆ ಉದ್ಯಮಕ್ಕೆ ಬೆಂಬಲ ನೀಡುವುದು ಸರ್ಕಾರದ ಉದ್ದೇಶ.

- ಸಕ್ಕರೆ ವಲಯವನ್ನು ನಿಯಂತ್ರಿಸುವ ರಂಗರಾಜನ್ ಸಮಿತಿಯು, ರೈತರು ಮತ್ತು ಮಿಲ್ ಗಳ ನಡುವೆ ನ್ಯಾಯೋಚಿತ ಮತ್ತು ನ್ಯಾಯಸಮ್ಮತವಾದ ರೀತಿಯಲ್ಲಿ ಕಬ್ಬು ಮೌಲ್ಯ ಸರಪಳಿಯಲ್ಲಿ ರಚಿಸಲಾದ ಆದಾಯ / ಮೌಲ್ಯದ ಹಂಚಿಕೆ ಇರಬೇಕು ಎಂದು ಹೇಳಿದ್ದರು. ಕಬ್ಬಿನ ಬೆಲೆ ಪಾವತಿಗಾಗಿ ಆದಾಯ ಹಂಚಿಕೆ ಸೂತ್ರ (ಆರ್ಎಸ್ಎಫ್) ಅಡಿಯಲ್ಲಿ, ಸಕ್ಕರೆಯ ಮೌಲ್ಯದ 75 ಶೇಕಡಾ ಅಥವಾ ಸಕ್ಕರೆಯ ಮೌಲ್ಯದ 70 ಮತ್ತು ಅದರ ಉಪ-ಉತ್ಪನ್ನಗಳ ಅಡಿಯಲ್ಲಿ ರೈತರಿಗೆ ಕಬ್ಬು ಬೆಲೆ ವಿತರಿಸಬೇಕು ಎಂಬುದು ಸಮಿತಿಯ ಶಿಫಾರಸ್ಸು.

- ಆದರೆ, ಆರ್ಎಸ್ಎಫ್ ಅಡಿಯಲ್ಲಿ ಕಬ್ಬಿನ ಬೆಲೆ ಹಂಚಿಕೆಯು ಎಫ್ಆರ್ಪಿಗಿಂತ ಕಡಿಮೆಯಿರುವಾಗ ರೈತರು ಕನಿಷ್ಟ ನ್ಯಾಯೋಚಿತ ಮತ್ತು ಲಾಭದಾಯಕ ಬೆಲೆ (FRP) ಪಾವತಿಯನ್ನು ಖಾತರಿಪಡಿಸಿಕೊಳ್ಳಬೇಕು.

- ಸಕ್ಕರೆ ಕಾರ್ಖಾನೆಗಳಿಗೆ ತಮ್ಮ ಡಿಸ್ಟಿಲರಿ ಗಳ ಆಧುನಿಕರಣಕ್ಕೆ ೫,೭೭೧ ಕೋಟಿ ರೂ ಸಾಲ ಮತ್ತು ಬಡ್ಡಿ ನೆರವು ಎಥೆನಾಲ್ ಅನ್ನು ಉತ್ಪಾದನೆಗೆ ಪೂರಕವಾಗಿ ಕಾರ್ಖಾನೆಯನ್ನು ರೂಪಿಸಿ ಕಬ್ಬಿನ ಮಿಲ್ ಮತ್ತು ರೈತರಿಗೆ ನೆರವು ನೀಡಲು ಕಾರಣವಾಗುತ್ತದೆ. ಎಥೆನಾಲ್ ಬಳಕೆಯಿಂದ ದೇಶದ ಪೆಟ್ರೋಲಿಯಂ ಬಿಲ್ ಕಡಿತಗೊಳ್ಳಲಿದೆ.

- ಬದುಕುಳಿಯುವುದಕ್ಕಾಗಿ ಮತ್ತು ಪರಸ್ಪರ ಸಮೃದ್ಧಿಗಾಗಿ ಸಕ್ಕರೆ ಗಿರಣಿಗಳು ಮತ್ತು ಕಬ್ಬು ಬೆಳೆಗಾರರ ನಡುವೆ ಸಹಜೀವನದ ಸಂಬಂಧವಿದೆ, ಸರಕಾರದಿಂದ ಇತ್ತೀಚಿನ ಬೆಂಬಲ ಇಬ್ಬರ ಸಮಸ್ಯೆಗಳನ್ನು ಪರಿಹರಿಸಲು ಪೂರಕವಾಗಿದೆ.

IAS/KAS
ನಮ್ಮ ಐಎಎಸ್ ಅಕಾಡೆಮಿ
ನಿಮ್ಮೂರಿಂದ..... ಮಸ್ಸೂರಿಗೆ/ಮೈಸೂರಿಗೆ

**S&T**

**1.. ಜಗತ್ತಿನ ಅತಿ ವೇಗದ ಸೂಪರ್ ಕಂಪ್ಯೂಟರ್-ಸಮ್ಮಿಟ್**

ಪ್ರಮುಖ ಸುದ್ದಿ

- ವಿಶ್ವದ ಶಕ್ತಿಶಾಲಿ ಸೂಪರ್ ಕಂಪ್ಯೂಟರ್‌ನ್ನು ಅಮೆರಿಕ ವಿಜ್ಞಾನಿಗಳು ಆವಿಷ್ಕರಿಸಿದ್ದಾರೆ.

ಮುಖ್ಯ ಅಂಶಗಳು

- 2 ಲಕ್ಷ ಟ್ರಿಲಿಯನ್ ಕ್ಯಾಲ್ಕ್ಯುಲೇಷನ್ ಗಳನ್ನು ಒಂದು ಸೆಕೆಂಡ್‌ನಲ್ಲಿ ಪೂರ್ಣಗೊಳಿಸಲು ಶಕ್ತವಾಗಿದೆ. ಅತಿ ವೇಗದಲ್ಲಿ ಕೆಲಸ ಮಾಡಬಲ್ಲ ತಂತ್ರಜ್ಞಾನಗಳನ್ನು ಹೊಂದಿರುವ ಸೂಪರ್ ಕಂಪ್ಯೂಟರ್ ಶಕ್ತಿ ಸಂಶೋಧನೆ, ಅಡ್ವಾನ್ಸ್‌ಡ್ ಮೆಟೀರಿಯಲ್ಸ್ ಹಾಗೂ ಆರ್ಟಿಫಿಷಿಯಲ್ ಇಂಟಲಿಜೆಂಟ್ಸ್ ವಿಭಾಗದಲ್ಲಿ ಇದನ್ನು ಬಳಕೆ ಮಾಡಲಾಗುತ್ತದೆ.
- ಓಕ್ ರಿಡ್ಜ್ ನ್ಯಾಷನಲ್ ಲ್ಯಾಬೋರೇಟರಿ (ಒಆರ್‌ಎನ್‌ಎಲ್) ಸೂಪರ್ ಕಂಪ್ಯೂಟರ್ ತಯಾರಿಸಿದ್ದು, ಸಮ್ಮಿಟ್ ಎಂದು ಹೆಸರಿಸಿದೆ.

- ತನ್ನ ಈ ಹಿಂದಿನ ಆವಿಷ್ಕಾರಗಳಿಂದ 8 ಪಟ್ಟು ಹೆಚ್ಚು ಶಕ್ತಿಶಾಲಿಯಾಗಿದೆ. ವೈಜ್ಞಾನಿಕ ಲೆಕ್ಕಾಚಾರ, ಸಂಶೋಧನಾತ್ಮಕ ಸಮಸ್ಯೆಗಳನ್ನು ಅತ್ಯಂತ ವೇಗವಾಗಿ ಪರಿಹರಿಸುತ್ತದೆ. ಐಬಿಎಂ ಎಸಿ922 ಸಿಸ್ಟಮ್‌ನ 4,608 ಕಂಪ್ಯೂಟ್ ಸರ್ವರ್‌ಗಳಿದ್ದು, ಪ್ರತಿ ಸರ್ವರ್ 22 ಕೋಟಿ ಐಬಿಎಂ ಪವರ್9 ಪ್ರೊಸೆಸರ್ ಹೊಂದಿದೆ.

- ಪ್ರತಿಯೊಂದು 6 ಎನ್‌ವಿಡಿಯಾ ಟೆಸ್ಲಾ ವಿ 100 ಗ್ರಾಫಿಕ್ಸ್ ಪ್ರೊಸೆಸಿಂಗ್ ಯುನಿಟ್, ಡುವೆಲ್ ರೇಲ್ ಮೆಲನೋಕ್ಸ್ ಇಡಿಆರ್ 100 ಜಿಬಿ ಇನ್‌ಫಿನಿ ಬ್ಯಾಂಡ್ ವ್ಯವಸ್ಥೆಗಳನ್ನು ಹೊಂದಿದೆ.

IAS/KAS
ನಮ್ಮ ಐಎಎಸ್ ಅಕಾಡೆಮಿ
ನಿಮ್ಮೂರಿಂದ..... ಮಸ್ಸೂರಿಗೆ/ಮೈಸೂರಿಗೆ

**2. ಶಾಂತಿಯುತ ಉದ್ದೇಶಗಳಿಗಾಗಿ ಬಾಹ್ಯಾಕಾಶ ಬಳಸಿಕೊಳ್ಳುವ ಉದ್ದೇಶದ ಭಾರತ-ಓಮಾನ್ ನಡುವಿನ ಒಡಂಬಡಿಕೆಗೆ ಕೇಂದ್ರ ಸಂಪುಟದ ಅನುಮೋದನೆ.**

ಪ್ರಮುಖ ಸುದ್ದಿ

- ಮಾನ್ಯ ಪ್ರಧಾನಮಂತ್ರಿಗಳಾದ ಶ್ರೀ ನರೇಂದ್ರ ಮೋದಿ ಅವರ ಅಧ್ಯಕ್ಷತೆಯಲ್ಲಿ ನಡೆದ ಕೇಂದ್ರ ಸಂಪುಟ ಸಭೆಯಲ್ಲಿ ಭಾರತ ಮತ್ತು ಓಮಾನ್ ದೇಶಗಳು 2018ರ ಫೆಬ್ರವರಿಯಲ್ಲಿ ಮಸ್ಕಟ್‌ನಲ್ಲಿ

ಮಾಡಿಕೊಂಡಿದ್ದ, ಶಾಂತಿಯುತ ಉದ್ದೇಶಗಳಿಗಾಗಿ ಬಾಹ್ಯಾಕಾಶ ಬಳಸಿಕೊಳ್ಳುವ ಉದ್ದೇಶದ ಒಡಂಬಡಿಕೆಯನ್ನು ಕುರಿತು ಚರ್ಚಿಸಿ, ಅನುಮೋದನೆ ನೀಡಲಾಯಿತು.

- ಭಾರತದ ಪರವಾಗಿ `ಭಾರತೀಯ ಬಾಹ್ಯಾಕಾಶ ಸಂಶೋಧನಾ ಸಂಸ್ಥೆ' (ಇಸ್ರೊ) ಮತ್ತು ಓಮಾನ್‌ನ ಪರವಾಗಿ ಆ ದೇಶದ ಸಾರಿಗೆ ಮತ್ತು ಸಂಪರ್ಕ ಸಚಿವಾಲಯಗಳು ಈ ಒಡಂಬಡಿಕೆಗೆ ಅಂಕಿತ ಹಾಕಿವೆ.

### ಮುಖ್ಯ ಅಂಶಗಳು

- ಈ ಒಡಂಬಡಿಕೆಯು ಬಾಹ್ಯಾಕಾಶ ವಿಜ್ಞಾನ, ಅದಕ್ಕೆ ಸಂಬಂಧಿಸಿದ ತಂತ್ರಜ್ಞಾನ ಮತ್ತು ಭೂಮಿಯ ದೂರಸಂವೇದಿ ಸೇರಿದಂತೆ ಇನ್ನಿತರ ಅನ್ವಯಿಕ ಅಂಶಗಳು, ಉಪಗ್ರಹ ಆಧರಿತ ದಿಕ್ಸೂಚಿ ಮಾರ್ಗದರ್ಶನ, ಅಂತರಿಕ್ಷ ವಿಜ್ಞಾನ ಮತ್ತು ಸಂಶೋಧನೆ, ಶೋಧನೌಕೆಗಳು ಮತ್ತು ಬಾಹ್ಯಾಕಾಶ ವ್ಯವಸ್ಥೆಗಳ ಬಳಕೆ ಮತ್ತು ಬಾಹ್ಯಾಕಾಶ ತಂತ್ರಜ್ಞಾನದ ಅನ್ವಯಿಕತೆ ಮುಂತಾದ ಕ್ಷೇತ್ರಗಳಲ್ಲಿ ಸಹಕಾರವನ್ನು ಸಾಧ್ಯವಾಗಿಸಲಿದೆ.

- ಈ ಒಡಂಬಡಿಕೆಯ ಅನ್ವಯ ಜಂಟಿ ಕಾರ್ಯ ಸಮಿತಿಯನ್ನು ರಚಿಸಲಾಗುವುದು. ಇದರಲ್ಲಿ ಭಾರತದ ಬಾಹ್ಯಾಕಾಶ ಇಲಾಖೆ/ಇಸ್ರೊದ ಸದಸ್ಯರು ಮತ್ತು ಓಮಾನ್‌ನ ಪರವಾಗಿ ಆ ದೇಶದ ಸಾರಿಗೆ ಮತ್ತು ಸಂಪರ್ಕ ಸಚಿವಾಲಯದ ಸದಸ್ಯರು ಇರಲಿದ್ದಾರೆ. ಒಡಂಬಡಿಕೆಯನ್ನು ಅನುಷ್ಠಾನಗೊಳಿಸುವ ಬಗೆ ಮತ್ತು ಈ ಸಮಿತಿಯು ಕಾಲಮಿತಿಯನ್ನು ನಿರ್ಧರಿಸಲಿದೆ.
- ಈ ಒಡಂಬಡಿಕೆಯು ಭೂಮಿಯ ದೂರಸಂವೇದಿ ವ್ಯವಸ್ಥೆ, ಉಪಗ್ರಹ ಆಧರಿತ ದಿಕ್ಸೂಚಿ ಮಾರ್ಗದರ್ಶನ ಮತ್ತು ಬಾಹ್ಯಾಕಾಶ ಕುರಿತು ಹೊಸಹೊಸ ಸಂಶೋಧನೆಗಳನ್ನು ಕೈಗೆತ್ತಿಕೊಳ್ಳಲು ಮತ್ತು ಅನ್ವಯಿಕತೆಯ ಸಾಧ್ಯತೆಗಳನ್ನು ಪರಿಶೋಧಿಸಲು ಉತ್ತೇಜನ ನೀಡಲಿದೆ.

### ಅನುಷ್ಠಾನದ ವಿಧಾನ ಮತ್ತು ಗುರಿಗಳು:

- ಈ ಒಡಂಬಡಿಕೆಯ ಅನ್ವಯ ಎರಡೂ ದೇಶಗಳ ಸದಸ್ಯರು/ಪ್ರತಿನಿಧಿಗಳು ಇರುವಂತಹ ಜಂಟಿ ಕಾರ್ಯ ಸಮಿತಿಯು ಅಸ್ತಿತ್ವಕ್ಕೆ ಬರಲಿದ್ದು, ಕಾಲಮಿತಿಯೂ ಸೇರಿದಂತೆ ಈ ಒಡಂಬಡಿಕೆಯಲ್ಲಿನ ಇತರ ಅಂಶಗಳನ್ನು ಹೇಗೆ ಅನುಷ್ಠಾನಕ್ಕೆ ತರಬಹುದೆನ್ನುವುದನ್ನು ಇದು ತೀರ್ಮಾನಿಸಲಿದೆ.

**ಪ್ರಯೋಜನಗಳು:**

- ಮನುಕುಲದ ಉಪಯೋಗಕ್ಕಾಗಿ ಬಾಹ್ಯಾಕಾಶ ತಂತ್ರಜ್ಞಾನವನ್ನು ಹೇಗೆ ಅಳವಡಿಸಿಕೊಳ್ಳಬಹುದೆನ್ನುವ ಕುರಿತು ಎರಡೂ ದೇಶಗಳು ಜತೆಯಾಗಿ ಚಟುವಟಿಕೆಗಳನ್ನು ಕೈಗೆತ್ತಿಕೊಳ್ಳಲು ಈ ಒಡಂಬಡಿಕೆ ದಾರಿ ಮಾಡಿಕೊಡಲಿದೆ. ಇದರಿಂದಾಗಿ ದೇಶದ ಎಲ್ಲ ವರ್ಗಗಳ ಮತ್ತು ಪ್ರದೇಶಗಳ ಜನರಿಗೆ ಲಾಭವಾಗಲಿದೆ.

**ಪರಿಣಾಮಗಳು:**

IAS/KAS
ನಮ್ಮ ಐಎಎಸ್ ಅಕಾಡೆಮಿ
ನಿಮ್ಮೂರಿಂದ..... ಮಸ್ಸೂರಿಗೆ/ಮೈಸೂರಿಗೆ

- ಓಮಾನ್ ಜತೆಗಿನ ಸಹಕಾರದಿಂದಾಗಿ, ಮನುಕುಲದ ಒಳಿತಿಗಾಗಿ ಜಂಟಿಯಾಗಿ ಬಾಹ್ಯಾಕಾಶ ತಂತ್ರಜ್ಞಾನವನ್ನು ಉಪಯೋಗಿಸಿಕೊಳ್ಳಬಹುದಾದಂತಹ ಚಟುವಟಿಕೆಗಳನ್ನು ವ್ಯಾಪಕವಾಗಿ ಕೈಗೆತ್ತಿಕೊಳ್ಳಲು ಇದರಿಂದ ಸಾಧ್ಯವಾಗಲಿದೆ.

**ಹಿನ್ನೆಲೆ:**

- ಓಮಾನ್ ದೇಶವು `ಭಾರತೀಯ ಬಾಹ್ಯಾಕಾಶ ಸಂಶೋಧನಾ ಸಂಸ್ಥೆ'(ಇಸ್ರೊ)ಯ ಸಹಕಾರದೊಂದಿಗೆ ತನ್ನ ಬಾಹ್ಯಾಕಾಶ ಯೋಜನೆಯನ್ನು ಅಭಿವೃದ್ಧಿಪಡಿಸಲು ಆಸಕ್ತಿಪಡಿಸಿದೆ.
- ಇದರ ಅಂಗವಾಗಿ ಓಮಾನ್‌ನ ಸಂಪರ್ಕ ಇಲಾಖೆಯ ನಾಲ್ವರು ಸದಸ್ಯರ ನಿಯೋಗವು 2011ರ ಮಾರ್ಚ್ ತಿಂಗಳಲ್ಲಿ ಇಸ್ರೊಗೆ ಭೇಟಿ ನೀಡಿತ್ತಲ್ಲದೆ, ಈ ಸಂಬಂಧವಾಗಿ ಇಸ್ರೊದ ಅಧಿಕಾರಿಗಳೊಂದಿಗೆ ವಿಚಾರ ವಿನಿಮಯ ನಡೆಸಿತ್ತು.
- ಜೊತೆಗೆ, ಈ ನಿಯೋಗವು ಇಸ್ರೊದ ತಾಂತ್ರಿಕ ಸೌಲಭ್ಯಗಳ ಕಚೇರಿಗೂ ಭೇಟಿ ನೀಡಿತ್ತು. ನಂತರ ಓಮಾನ್‌ನ ಆಡಳಿತವು ಬಾಹ್ಯಾಕಾಶ ತಂತ್ರಜ್ಞಾನ ಸೌಲಭ್ಯ ಕ್ಷೇತ್ರದಲ್ಲಿ ಇಸ್ರೊದೊಂದಿಗೆ ಸಹಕಾರವನ್ನು ಹೊಂದುವ ಆಸಕ್ತಿಯನ್ನು ಭಾರತದಲ್ಲಿನ ತನ್ನ ರಾಯಭಾರಿಗೆ 2016ರ ಮೇ ತಿಂಗಳಲ್ಲಿ ವ್ಯಕ್ತಪಡಿಸಿತ್ತು.

## 3. ಧ್ರುವಉಪಗ್ರಹ ಉಡ್ಡಯಕ ವಾಹನ ಮಾರ್ಕ್ III ಮುಂದುವರಿಕೆ ಕಾರ್ಯಕ್ರಮ ಹಂತ 6ಕ್ಕೆ ಸಂಪುಟ ಅನುಮೋದನೆ.

### ಪ್ರಮುಖ ಸುದ್ದಿ

IAS/KAS ನಮ್ಮ ಐಎಎಸ್ ಅಕಾಡೆಮಿ ನಿಮ್ಮೂರಿಂದ..... ಮಸ್ಸೂರಿಗೆ/ಮೈಸೂರಿಗೆ

- ಪ್ರಧಾನ ಮಂತ್ರಿ ಶ್ರೀ ನರೇಂದ್ರ ಮೋದಿ ಅಧ್ಯಕ್ಷತೆಯಲ್ಲಿ ನಡೆದ ಕೇಂದ್ರ ಸಂಪುಟ ಸಭೆಯು ಧ್ರುವ ಉಪಗ್ರಹ ಉಡ್ಡಯಕ ವಾಹನ (ಪಿ.ಎಸ್.ಎಲ್.ವಿ.) ಮುಂದುವರಿಕೆ ಕಾರ್ಯಕ್ರಮ (ಹಂತ 6) ಮತ್ತು ಈ ಕಾರ್ಯಕ್ರಮದಡಿಯಲ್ಲಿ 30 ಪಿ.ಎಸ್.ಎಲ್.ವಿ. ಕಾರ್ಯಾಚರಣಾ ಯಾನಗಳಿಗೆ ಅನುಮೋದನೆ ನೀಡಿತು.

### ಮುಖ್ಯ ಅಂಶಗಳು

- ಈ ಕಾರ್ಯಕ್ರಮವು ಭೂ ವೀಕ್ಷಣೆ, ಸಂಚರಣೆ ಮತ್ತು ಬಾಹ್ಯಾಕಾಶ ವಿಜ್ಞಾನಗಳ ಉಪಗ್ರಹಗಳ ಉಡಾವಣಾ ಆವಶ್ಯಕತೆಗಳನ್ನು ಪೂರೈಸಲಿದೆ. ಇದು ಭಾರತೀಯ ಉದ್ಯಮದಲ್ಲಿ ಉತ್ಪಾದನೆಯ ಮುಂದುವರಿಕೆಯನ್ನು ಖಾತ್ರಿಗೊಳಿಸಲಿದೆ.

- ಒಟ್ಟು ಹಣಕಾಸು ಮೊತ್ತ 6131.00 ಕೋ.ರೂ.ಗಳಷ್ಟಾಗಿದ್ದು, 30 ಪಿ.ಎಸ್.ಎಲ್.ವಿ. ವಾಹನಗಳು, ಅವಶ್ಯ ಸೌಲಭ್ಯ ಒಟ್ಟುಗೂಡಿಸುವಿಕೆ, ಕಾರ್ಯಕ್ರಮ ನಿಭಾವಣೆ ಮತ್ತು ಉಡ್ಡಯನ ಪ್ರಚಾರಗಳ ವೆಚ್ಚವನ್ನು ಇದು ಒಳಗೊಂಡಿದೆ.

ಪ್ರಮುಖ ಪರಿಣಾಮ:

- ಪಿ.ಎಸ್.ಎಲ್.ವಿ.ಕಾರ್ಯಾಚರಣೆಯಿಂದ ಭೂ ವೀಕ್ಷಣೆ, ವಿಪತ್ತು ನಿರ್ವಹಣೆ, ಸಂಚರಣೆ ಉಪಗ್ರಹಗಳ ಉಡಾವಣೆಯಲ್ಲಿ ಮತ್ತು ಬಾಹ್ಯಾಕಾಶ ವಿಜ್ಞಾನಗಳಲ್ಲಿ ದೇಶವು ಸ್ವಾವಲಂಬನೆಯನ್ನು ಸಾಧಿಸಿದೆ. ಪಿ.ಎಸ್.ಎಲ್.ವಿ. ಮುಂದುವರಿಕೆ ಕಾರ್ಯಕ್ರಮ ಈ ಸಾಮರ್ಥ್ಯದ ಮುಂದುವರಿಕೆಯಾಗಿದೆ ಮತ್ತು ರಾಷ್ಟ್ರೀಯ ಅವಶ್ಯಕತೆಗಳಿಗೆ ಇಂತಹ ಉಪಗ್ರಹಗಳ ಉಡಾವಣೆಯಲ್ಲಿ ಸ್ವಾವಲಂಬನೆ ಸಾಧನೆಯ ಮುಂದುವರಿಕೆಯಾಗಿದೆ.

- ಪಿ.ಎಸ್.ಎಲ್.ವಿ. ಮುಂದುವರಿಕೆ ಕಾರ್ಯಕ್ರಮ-ಹಂತ 6 ಒಂದು ವರ್ಷಕ್ಕೆ 8 ಉಡಾವಣೆಗಳನ್ನು ಮಾಡುವ ಬೇಡಿಕೆಯನ್ನು ಈಡೇರಿಸಲಿದೆ, ಇದಕ್ಕೆ ಭಾರತೀಯ ಉದ್ಯಮದ ಗರಿಷ್ಠ ಭಾಗೀದಾರಿಕೆ ಇರುತ್ತದೆ. ಎಲ್ಲಾ ಕಾರ್ಯಾಚರಣಾ ಯಾನಗಳೂ 2019-2024ರ ಅವಧಿಯಲ್ಲಿ ಪೂರ್ಣಗೊಳ್ಳುತ್ತವೆ.

- ಈ ಕಾರ್ಯಕ್ರಮವು ಭೂ ಸರ್ವೇಕ್ಷಣೆ, ವೀಕ್ಷಣೆ, ಸಂಚರಣೆ, ಮತ್ತು ಬಾಹ್ಯಾಕಾಶ ವಿಜ್ಞಾನಗಳಲ್ಲಿ ಉಪಗ್ರಹಗಳ ಉಡ್ಡಯನದ ಬೇಡಿಕೆಯನ್ನು ಈಡೇರಿಸಲಿದೆ. ಇದು ಭಾರತೀಯ ಕೈಗಾರಿಕೋದ್ಯಮದಲ್ಲಿ ಉತ್ಪಾದನೆಯ ಮುಂದುವರಿಕೆಯನ್ನು ಖಾತ್ರಿಪಡಿಸುತ್ತದೆ.

- ಪಿ.ಎಸ್.ಎಲ್.ವಿ. ಮುಂದುವರಿಕೆ ಕಾರ್ಯಕ್ರಮವನ್ನು ಮೊದಲಿಗೆ 2008 ರಲ್ಲಿ ಮಂಜೂರು ಮಾಡಲಾಗಿತ್ತು. ನಾಲ್ಕು ಹಂತಗಳು ಪೂರ್ಣಗೊಂಡಿದ್ದು, ಐದನೇ ಹಂತ 2019-20ರ ಎರಡನೇ ತ್ರೈಮಾಸಿಕದಲ್ಲಿ ಪೂರ್ಣಗೊಳ್ಳಲಿದೆ. ಆರನೇ ಹಂತ 2019-20 ರ ಮೂರನೇ ತ್ರೈಮಾಸಿಕದಿಂದ 2023-24 ರ ಮೊದಲನೇ ತ್ರೈಮಾಸಿಕದವರೆಗಿನ ಅವಧಿಯಲ್ಲಿ ಉಪಗ್ರಹ ಉಡ್ಡಯನ ಯೋಜನೆಗಳ ಆವಶ್ಯಕತೆಗಳನ್ನು ಈಡೇರಿಸಲಿದೆ.

**ಹಿನ್ನೆಲೆ:**

- ಪಿ.ಎಸ್.ಎಲ್.ವಿ.ಯು ಸೂರ್ಯ ಕೇಂದ್ರಿತ ಧ್ರುವ ಕಕ್ಷೆ (ಎಸ್.ಎಸ್.ಪಿ.ಒ.), ಭೂ ಕೇಂದ್ರಿತ ವರ್ಗಾವಣಾ ಕಕ್ಷೆ (ಜಿ.ಟಿ.ಒ. ) ಮತ್ತು ಕಡಿಮೆ ಬಾಗಿದ ಭೂಕಕ್ಷೆಗೆ ಉಪಗ್ರಹಗಳನ್ನು ರವಾನಿಸುವ ಕಾರ್ಯಕ್ರಮದ ವ್ಯಾಪಕ ಉಪಯೋಗಿ ಉಡ್ಡಯಕ ವಾಹಕವಾಗಿ ಮೂಡಿ ಬಂದಿದೆ.
- 2018 ರ ಏಪ್ರಿಲ್ 12 ರಂದು ಪಿ.ಎಸ್.ಎಲ್.ವಿ.-ಸಿ 41 ರ ಯಶಸ್ವೀ ಉಡ್ಡಯನದ ಬಳಿಕ ಪಿ.ಎಸ್.ಎಲ್.ವಿ.ಯು ಅಭಿವೃದ್ಧಿಗೆ ಸಂಬಂಧಿಸಿದ ಮೂರು ಮತ್ತು 43 ಕಾರ್ಯಾಚರಣಾ ಯಾನಗಳನ್ನು ಪೂರ್ಣಗೊಳಿಸಿದೆ ಮತ್ತು ಕಳೆದ 41 ಯಾನಗಳು ಯಶಸ್ವಿಯಾಗಿವೆ. ಉತ್ಪಾದನಾ ಸಾಮರ್ಥ್ಯದೊಂದಿಗೆ ರಾಷ್ಟ್ರೀಯ ಉಪಗ್ರಹಗಳಿಗೆ ಉಡ್ಡಯಕವಾಗಿ ತನ್ನನು ಸ್ಥಾಪಿಸಿಕೊಂಡಿರುವ ಪಿ.ಎಸ್.ಎಲ್.ವಿ.ಯು ವಾಣಿಜ್ಯಿಕ ಉಡಾವಣಾ ಅವಕಾಶಗಳಿಗೂ ಪ್ರತಿಕ್ರಿಯಿಸುವ ಸಾಮರ್ಥ್ಯ ಪಡೆದುಕೊಂಡಿದೆ.

## 4. ಕ್ವಾಂಟಂ ಲೀಫ್

**ಪ್ರಮುಖ ಸುದ್ದಿ**

- ಮರಗಿಡಗಳ ಎಲೆಗಳು ಇಂಗಾಲ ಡೈ ಆಕ್ಸೈಡ್ ಅನ್ನು ಹೀರಿಕೊಂಡು ಆಮ್ಲಜನಕವನ್ನು ಬಿಡುಗಡೆ ಮಾಡುತ್ತವೆ. ಇದು ಅವುಗಳಲ್ಲಿ ಆಗುವ ದ್ಯುತಿಸಂಶ್ಲೇಷಣೆ ಕ್ರಿಯೆ ಇದಕ್ಕೆ ಕಾರಣ ಆದರೆ, ಇತ್ತೀಚೆಗೆ ಹಸಿರು ಮಾಯವಾಗಿ, ಹೆಚ್ಚಿನ ಪ್ರಮಾಣದಲ್ಲಿ ಬಿಡುಗಡೆಯಾಗುವ ಇಂಗಾಲ ಡೈ

ಆಕ್ಸೈಡ್ ಅನ್ನು ಹೀರಿಕೊಳ್ಳಲು ಮರಗಿಡಗಳೇ ಇಲ್ಲದಂತಾಗಿ ವಾಯುಮಾಲಿನ್ಯ ಮತ್ತು ಜಾಗತಿಕ ತಾಪಮಾನ ಹೆಚ್ಚಳ ಹಾಗೂ ಹವಾಮಾನ ಬದಲಾವಣೆಯಂತ ಸಮಸ್ಯೆಗಳು ಉದ್ಭವಿಸಿವೆ.

- ಈ ಸಮಸ್ಯೆಯನ್ನು ಪರಿಣಾಮಕಾರಿಯಾಗಿ ಪರಿಹರಿಸುವ ಜತೆಗೆ ನವೀಕರಿಸಬಹುದಾದ ಇಂಧನ ಉತ್ಪಾದಿಸಬಲ್ಲಂತ ಎಲೆಯೊಂದು ಭಾರತೀಯ ವಿಜ್ಞಾನ ಸಂಸ್ಥೆಯ (ಐಐಎಸ್ಸಿ) ಅಂಗಳದಲ್ಲಿ ಮೂಡಿದೆ! ಇದು ನೈಸರ್ಗಿಕವಾದದ್ದಲ್ಲ. ಬದಲಿಗೆ ಕೃತಕವಾದದ್ದು. ಅಷ್ಟೇ ಅಲ್ಲ, ನೈಸರ್ಗಿಕ – ಎಲೆಗಳಿಗಿಂತಲೂ 100 ಪಟ್ಟು ಹೆಚ್ಚು ಸಮರ್ಥವಾಗಿ ಕಾರ್ಯನಿರ್ವಹಿಸಬಲ್ಲದು .
- ಐಐಎಸ್ಸಿ ಸಂಶೋಧಕರ ಪ್ರಕಾರ ಕೃತಕ ಎಲೆಯು ಸಂಪೂರ್ಣವಾಗಿ ಜೈವಿಕ ವಿಘಟನೆಗೊಳ್ಳುವ, ವಾತಾವರಣದಲ್ಲಿ ಲಭ್ಯವಿರುವ ಧಾತುಗಳು ಮತ್ತು ಅಷ್ಟೇನು ದುಬಾರಿಯಲ್ಲದ ವಸ್ತುಗಳನ್ನು ಒಳಗೊಂಡಿದೆ. ಇದಕ್ಕೆ ಕ್ವಾಂಟಂ ಲೀಫ್ (ಕ್ವಾಂಟಂ ಎಲೆ) ಎಂದು ಕರೆಯಲಾಗುತ್ತದೆ. ಇದರ ಮೇಲೆ – ಸೂರ್ಯ ಕಿರಣಗಳು ಬಿದ್ದಾಗ ಇಂಗಾಲ ಡೈ ಆಕ್ಸೈಡ್ ಅನ್ನು ಆಮ್ಲಜನಕವಾಗಿ ಹಾಗೂ ನವೀಕರಿಸಬಹುದಾದ ಇಂಧನವಾಗಿ ಪರಿವರ್ತಿಸುತ್ತದೆ. ಇದರಿಂದ ವಾತಾವರಣದಲ್ಲಿ ಇರಬೇಕಾದ ಇಂಗಾಲ ಡೈ ಆಕ್ಸೈಡ್ ನ ಪ್ರಮಾಣದಲ್ಲಿ ಸಮತೋಲನ ಕಾಯ್ದುಕೊಳ್ಳಲು ಅನುಕೂಲವಾಗುತ್ತದೆ.

IAS/KAS
ನಮ್ಮ ಐಎಎಸ್ ಅಕಾಡೆಮಿ
ನಿಮ್ಮೂರಿಂದ..... ಮಸ್ಸೂರಿಗೆ/ಮೈಸೂರಿಗೆ

**IR**

**1.ಭಾರತೀಯರು ಅಮೆರಿಕದ ಪ್ರಜೆಯಾಗುವುದು ಕಷ್ಟಕರ: ಅಧ್ಯಯನ ವರದಿ**

ಪ್ರಮುಖ ಸುದ್ದಿ

- ಅಮೆರಿಕದ ಗ್ರೀನ್ ಕಾರ್ಡ್ ಪಡೆಯಲು ಹೊಸ ಅರ್ಜಿ ಹಾಕಿದ ಭಾರತೀಯರಿಗೆ ಅಲ್ಲಿನ ಪ್ರಜೆಯಾಗುವ ಕನಸು ಮರೀಚಿಕೆಯಾಗಿ ಉಳಿದುಕೊಳ್ಳುವ ಸಾಧ್ಯತೆಯೇ ಹೆಚ್ಚಾಗಿದೆ.
- ಅಮೆರಿಕ ಪ್ರತಿ ದೇಶದ ವಲಸಿಗರ ಮಿತಿಗಾಗಿ ಜಾರಿಗೊಳಿಸಿರುವ ಕಾನೂನಿನ ಪರಿಣಾಮ ಹಲವಾರು ಭಾರತೀಯರು ಅಮೆರಿಕದ ಗ್ರೀನ್ ಕಾರ್ಡ್ ಪಡೆದು, ಕಾನೂನು ಪ್ರಕಾರ ಸ್ವಂತ ಮನೆ ಹೊಂದುವುದು ಕಷ್ಟಕರವಾಗಲಿದೆ.

ಮುಖ್ಯ ಅಂಶಗಳು

- ಕೇಟೋ ಸಂಸ್ಥೆಯ ಥಿಂಕ್ ಟ್ಯಾಂಕ್ ಈ ಕುರಿತು ಅಧ್ಯಯನ ನಡೆಸಿದ್ದು, ಅಮೆರಿಕದ ಪ್ರಜೆಯಾಗ ಬಯಸುವ ಭಾರತೀಯರು ಹಲವಾರು ವರ್ಷ ಕಾದರೂ ತಮ್ಮ ಜೀವಿತಾವಧಿಯಲ್ಲಿ ಹಸಿರು ಕಾರ್ಡ್ ಪಡೆದುಕೊಳ್ಳುವುದು ಅನುಮಾನ ಎಂದು ವರದಿ ಮಾಡಿದೆ.

- ಅಮೆರಿಕದ ವಲಸಿಗರ ನಿರ್ವಹಣೆ ವಿಭಾಗದಿಂದ(ಯುಎಸ್‌ಸಿಐಎಸ್) ಅಮೆರಿಕದ ಪ್ರಜೆಯಾಗಲು ಸಲ್ಲಿಸಿದ ಭಾರತೀಯರ ಅರ್ಜಿಗಳ ಸಂಖ್ಯೆ, ವಿಲೇವಾರಿಗೊಳ್ಳಲು ತೆಗೆದುಕೊಳ್ಳುವ ಕಾಲಾವಧಿಗಳನ್ನು ಲೆಕ್ಕಾಚಾರ ಹಾಕಿದೆ. ಇದೇ ರೀತಿ ಮುಂದುವರೆದರೆ, ಹೊಸ ಅರ್ಜಿ ಸಲ್ಲಿಸುವವರಿಗೆ 150 ವರ್ಷಗಳ ಬಳಿಕ ಗ್ರೀನ್ ಕಾರ್ಡ್ ಸಿಗುವ ಸಾಧ್ಯತೆಗಳಿವೆ ಎಂದು ವರದಿ ನೀಡಿದೆ.

IAS/KAS
ನಮ್ಮ ಐಎಎಸ್ ಅಕಾಡೆಮಿ
ನಿಮ್ಮೂರಿಂದ..... ಮಸ್ಸೂರಿಗೆ/ಮೈಸೂರಿಗೆ

- ಇಬಿ-2 ವಿಭಾಗಕ್ಕೆ ಅಮೆರಿಕದ ಕಾನೂನಿನಲ್ಲಿರುವ ಅಂಶದಿಂದ ಅರ್ಜಿ ವಿಲೇವಾರಿ ಮಾಡಲು ಅಡ್ಡಿಯಾಗುತ್ತಿದೆ. ಈ ವಿಭಾಗದಲ್ಲಿ ಪ್ರತಿ ದೇಶದ ಶೇ.7ರಷ್ಟು ಮಂದಿಗೆ ಮಾತ್ರ ಹಸಿರು ಕಾರ್ಡ್ ನೀಡಲು ಅವಕಾಶ ಇದೆ. ಇಬಿ-2 ವಿಭಾಗದಲ್ಲಿ ಒಟ್ಟಾರೆ 4.33 ಲಕ್ಷ ಮಂದಿಯ ಅರ್ಜಿಗಳು ವಿಲೇವಾರಿಗೆ ಬಾಕಿ ಉಳಿದಿದೆ ಎಂದು ಯುಎಸ್‌ಸಿಐಎಸ್ ಮಾಹಿತಿ ನೀಡಿದೆ. ಈ ವಿವರಗಳ ಪ್ರಕಾರ ಇಬಿ-2 ವಿಭಾಗದಲ್ಲಿ ಹಸಿರು ಕಾರ್ಡ್‌ಗೆ ಅರ್ಜಿ ಸಲ್ಲಿಸಿದರೆ, ಕಾರ್ಡ್ ಪಡೆಯಲು 150 ವರ್ಷಗಳಾಗಲಿದೆ ಎಂದು ಸಂಸ್ಥೆ ಲೆಕ್ಕಾಚಾರ ಹಾಕಿದೆ.

- 2018ರ ಏಪ್ರಿಲ್ 20ರ ವರೆಗೆ 6,32,219 ಮಂದಿ ಭಾರತೀಯರು ಹಾಗೂ ಅವರ ಕುಟುಂಬ ಹಸಿರು ಕಾರ್ಡ್‌ಗೆ ಸಲ್ಲಿಸಿದ ಅರ್ಜಿ ವಿಲೇವಾರಿಗೊಳ್ಳದೆ ಬಾಕಿ ಉಳಿದುಕೊಂಡಿದೆ. ಈ ಪೈಕಿ

ಅತ್ಯುತ್ತಮ ಕೌಶಲ್ಯ ವಿಭಾಗದಲ್ಲಿನ ಇಬಿ-1(ಎಂಪ್ಲಾಯ್ಮೆಂಟ್ ಬೇಸ್ಡ್) ವಲಸಿಗರ ಅರ್ಜಿ ಅತಿ ಕಡಿಮೆ ಇರುವುದಾಗಿ ಮಾಹಿತಿ ಲಭ್ಯವಾಗಿದೆ.

- ಈ ವಿಭಾಗವನ್ನು ಅತಿ ವಿಶೇಷ ವಲಸಿಗರೆಂದು ಕರೆಯಲಾಗುತ್ತಿದ್ದು, ಇದಕ್ಕೆ ಕೇವಲ 6 ವರ್ಷ ಕಾಯುವಿಕೆ ಅವಧಿ ಇದೆ ಎಂದು ಸಂಸ್ಥೆ ತನ್ನ ಅಧ್ಯಯನದಲ್ಲಿ ತಿಳಿಸಿದೆ.
- ಯುಎಸ್‌ಸಿಐಎಸ್‌ನ ಮಾಹಿತಿ ಪ್ರಕಾರ ಒಟ್ಟಾರೆ 83,554 ಭಾರತೀಯರ ಅರ್ಜಿಗಳು ಇಬಿ-1 ವಿಭಾಗದಲ್ಲಿ ವಿಲೇವಾರಿಗೊಳ್ಳಲು ಬಾಕಿ ಇವೆ. ಈ ಪೈಕಿ 34,824 ಮಂದಿ ಅರ್ಜಿದಾರರು ಹಾಗೂ 48,754 ಮಂದಿ ಅರ್ಜಿದಾರರ ಕುಟುಂಬ ಸದಸ್ಯರು ಎಂದು ತಿಳಿದು ಬಂದಿದೆ.

- ಇಬಿ-3 ವಿಭಾಗದ ಭಾರತೀಯ ವಲಸಿಗರು(ಬ್ಯಾಚುಲರ್ಸ್) ಹಸಿರು ಕಾರ್ಡ್ ಪಡೆಯಲು ಕನಿಷ್ಠ 17 ವರ್ಷ ಕಾಯಬೇಕಾಗಿದ್ದು, 54,892 ಅರ್ಜಿಗಳು ವಿಲೇವಾರಿಗೊಳ್ಳಲು ಬಾಕಿ ಇವೆ.

## 2. ಸೈಬರ್ ಭದ್ರತೆ ಭಯೋತ್ಪಾದನೆ ನಿಗ್ರಹ ಸಹಕಾರಕ್ಕೆ ಭಾರತ-ಇಟಲಿ ನಿರ್ಧಾರ

ನಮ್ಮ ಐಎಎಸ್ ಅಕಾಡೆಮಿ
ನಿಮ್ಮೂರಿಂದ..... ಮಸ್ಸೂರಿಗೆ/ಮೈಸೂರಿಗೆ

### ಪ್ರಮುಖ ಸುದ್ದಿ

- ದ್ವಿಪಕ್ಷೀಯ ಸಂಬಂಧ ಸುಧಾರಣೆಯ ನಿಟ್ಟಿನಲ್ಲಿ ಭಾರತ ಮತ್ತು ಇಟಲಿ ಚರ್ಚೆ ನಡೆಸಿದ್ದು, ಭಯೋತ್ಪಾದನೆ ನಿಗ್ರಹ ಮತ್ತು ಸೈಬರ್ ಭದ್ರತೆಯಲ್ಲಿ ಪರಸ್ಪರ ಸಹಕಾರದಿಂದ ಕಾರ್ಯ ನಿರ್ವಹಿಸಲು ಉಭಯ ದೇಶಗಳು ಒಪ್ಪಿಗೆ ಸೂಚಿಸಿವೆ.

### ಮುಖ್ಯ ಅಂಶಗಳು

- ನಾಲ್ಕು ರಾಷ್ಟ್ರಗಳ ಪ್ರವಾಸದಲ್ಲಿರುವ ವಿದೇಶಾಂಗ ವ್ಯವಹಾರಗಳ ಸಚಿವೆ ರವರು ವರು ಇಟಲಿಯ ನೂತನ ಪ್ರಧಾನಿ ಪ್ರೊಫೆಸರ್ ಗಿಯೊಸೆಪ್ಪೆ ಕಾಂಟೆ ಹಾಗೂ ವಿದೇಶಾಂಗ ಸಚಿವ ಎಂಜೊ ಮಾವೆರೋ ಮಿಲಾನೆಸಿ ಅವರೊಟ್ಟಿಗೆ ಮಾತುಕತೆ ನಡೆಸಿ ಭಯೋತ್ಪಾದನೆ ನಿಗ್ರಹ ಹಾಗೂ ಬಂಡವಾಳ ಹೂಡಿಕೆ ಅವಕಾಶಗಳ ಕುರಿತು ಚರ್ಚೆ ನಡೆಸಿದರು.

- ಆರ್ಥಿಕ ಮತ್ತು ಆಡಳಿತಾತ್ಮಕ ಸುಧಾರಣಾ ನೀತಿಗಳಿಂದ ಭಾರತದಲ್ಲಿ ಉದ್ಯಮ ಸ್ನೇಹಿ ವಾತಾವರಣ ನಿರ್ಮಾಣವಾಗಿದ್ದು ಮೂಲಸೌಕರ್ಯ, ಆಹಾರ ಸಂಸ್ಕರಣೆ, ನವೀಕೃತ ಇಂಧನ ಕ್ಷೇತ್ರದಲ್ಲಿ ಹೂಡಿಕೆಗೆ ಅವಕಾಶಗಳು ತೆರೆದುಕೊಂಡಿವೆ.
- ಇಟಲಿಯ ಜತೆಗಿನ ವಾಣಿಜ್ಯ ಬಂಧ ವಿಸ್ತರಣೆಗೆ ಭಾರತ ಉತ್ಸುಕವಾಗಿದೆ ಎಂಬ ನಿಲುವನ್ನು ಸುಷ್ಮಾ ಸ್ವರಾಜ್ ಮನವರಿಕೆ ಮಾಡಿಕೊಟ್ಟರು. ಪ್ರಾದೇಶಿಕ ಹಾಗೂ ಜಾಗತಿಕ ಮಟ್ಟದಲ್ಲಿ ಪರಸ್ಪರ ಸಹಕಾರದಿಂದ ಕಾರ್ಯನಿರ್ವಹಿಸುವ ವಿಚಾರದಲ್ಲಿ ಭಾರತ ಮತ್ತು ಇಟಲಿಯ ನಿಲುವುಗಳ ಕುರಿತು ಸ್ವರಾಜ್ ಹಾಗೂ ಪ್ರಧಾನಿ ಗಿಯೊಸೆಪ್ಪೆ ಕಾಂಟೆ ವಿಚಾರ ವಿನಿಮಯ ನಡೆಸಿದರು. ಭಯೋತ್ಪಾದನೆ ನಿಗ್ರಹ ಹಾಗೂ ಸೈಬರ್ ಭದ್ರತೆಗೆ ಒಪ್ಪಿಗೆ ಸೂಚಿಸಿದರು .

IAS/KAS
ನಮ್ಮ ಐಎಎಸ್ ಅಕಾಡೆಮಿ
ನಿಮ್ಮೂರಿಂದ..... ಮಸ್ಸೂರಿಗೆ/ಮೈಸೂರಿಗೆ

**3. ಚೀನಾ ಸರಕುಗಳ ಮೇಲೆ 50 ಶತಕೋಟಿ ಡಾಲರ್ ಸುಂಕ ವಿಧಿಸಿದ ಅಮೆರಿಕ**

ಪ್ರಮುಖ ಸುದ್ದಿ

- ಚೀನಾ ಸರಕುಗಳ ಮೇಲೆ 50 ಶತಕೋಟಿ ಡಾಲರ್ ಮೊತ್ತದ ಸುಂಕ ವಿಧಿಸಲು ಅಮೆರಿಕ ಅಧ್ಯಕ್ಷ ಡೊನಾಲ್ಡ್ ಟ್ರಂಪ್ ಅನುಮೋದನೆ ನೀಡಿದ್ದಾರೆ.

- ಈ ಹೊಸ ಬೆಳವಣಿಗೆಯಿಂದ ವಿಶ್ವದ ಎರಡು ಬೃಹತ್ ಆರ್ಥಿಕತೆ ರಾಷ್ಟ್ರಗಳ ನಡುವೆ ವ್ಯಾಪಾರ ಉದ್ವಿಗ್ನತೆ ಮತ್ತಷ್ಟು ಉಲ್ಬಣಗೊಳ್ಳುವ ಸಾಧ್ಯತೆ ಇದೆ. ಚೀನಾದ ಸರಕುಗಳ ಮೇಲಿನ ಸುಂಕ, ಬೌದ್ಧಿಕ ಆಸ್ತಿಯ ಕಳ್ಳತನ ಎಂದು ವರ್ಗೀಕರಿಸುವ ಪ್ರತಿಕ್ರಿಯೆಗೆ ಅನುಗುಣವಾಗಿದೆ.

### ಮುಖ್ಯ ಅಂಶಗಳು

- ಈ ನಿರ್ಧಾರ ಕೈಗೊಳ್ಳುವುದಕ್ಕೆ ಮುನ್ನ ಟ್ರಂಪ್ ವಿವಿಧ ಇಲಾಖೆಗಳ ಸಚಿವರು ಹಾಗೂ ಉನ್ನತಾಧಿಕಾರಿಗಳೊಂದಿಗೆ ಮಹತ್ವದ ಸಭೆ ನಡೆಸಿದರು. ಅಮೆರಿಕದ ವಾಣಿಜ್ಯ ಕಾರ್ಯದರ್ಶಿ ವಿಲ್ಬರ್ ರಾಸ್, ಖಜಾನೆ ಕಾರ್ಯದರ್ಶಿ ಸ್ಟೀವನ್ ಮನ್ಚಿನ್ ಮತ್ತು ಅಮೆರಿಕ ವ್ಯಾಪಾರ ಪ್ರತಿನಿಧಿ ರಾಬರ್ಟ್ ಲೈಥೈಸರ್ ಅವರೊಂದಿಗೆ ಗುರುವಾರ 90 ನಿಮಿಷಗಳ ಸಮಾಲೋಚನೆ ನಡೆಸಿದ ನಂತರ ಚೀನಿ ಸರಕುಗಳ ಮೇಲೆ 50 ಶತಕೋಟಿ ಡಾಲರ್ ಸುಂಕ ವಿಧಿಸಲು ಟ್ರಂಪ್ ಸಮ್ಮತಿ ಸೂಚಿಸಿದರು.

- ಅಮೆರಿಕದ ಈ ಕ್ರಮಕ್ಕೆ ಚೀನಾ ತೀವ್ರವಾಗಿ ಖಂಡಿಸಿದೆ. ಈ ಹಿನ್ನೆಲೆಯಲ್ಲಿ ಪ್ರತಿಕ್ರಿಯಿಸಿರುವ ಚೀನಾ ವಿದೇಶಾಂಗ ಸಚಿವಾಲಯದ ವಕ್ತಾರ ಗೆಂಗ್ ಶುವಾಂಗ್, "ಅಮೆರಿಕ ತನ್ನ ಪರವಾಗಿ ಏಕಪಕ್ಷೀಯ ರಕ್ಷ ಣಾ ನೀತಿಯ ಕ್ರಮಗಳನ್ನು ಅಳವಡಿಸಿಕೊಂಡರೆ ಮತ್ತು ಚೀನಾದ ಹಿತಾಸಕ್ತಿಗಳನ್ನು ಹಾನಿಗೊಳಿಸಿದರೆ, ನಾವು ಕೂಡ ತಕ್ಷ ಣ ಪ್ರತಿಕ್ರಿಯಿಸುತ್ತೇವೆ ಹಾಗೂ ನಮ್ಮ ಕಾನೂನುಬದ್ಧ ಹಕ್ಕುಗಳು ಮತ್ತು ಹಿತಾಸಕ್ತಿಗಳನ್ನು ದೃಢವಾಗಿ ಕಾಪಾಡಿಕೊಳ್ಳಲು ಅಗತ್ಯ ಕ್ರಮಗಳನ್ನು ತೆಗೆದುಕೊಳ್ಳುತ್ತೇವೆ," ಎಂದು ಹೇಳಿದ್ದಾರೆ.

- ಚೀನಾ ಸರಕುಗಳ ಮೇಲೆ 50 ಶತಕೋಟಿ ಡಾಲರ್ ಮೊತ್ತದ ಸುಂಕ ವಿಧಿಸಲಾಗುವುದು ಎಂದು ಕಳೆದ ಮಾರ್ಚ್‌ನಲ್ಲಿ ಟ್ರಂಪ್ ಎಚ್ಚರಿಸಿದ್ದರು. ಇದಕ್ಕೆ ಪ್ರತಿಯಾಗಿ ತಾನು ಕೂಡ ಕಾರು, ವಿಮಾನ ಮತ್ತು ಸೊಯಾಬೀನ್ ರೀತಿಯ ಅಮೆರಿಕನ್ ಸರಕುಗಳ ಮೇಲೆ 50 ಶತಕೋಟಿ ಡಾಲರ್ ಪ್ರತಿಕಾರ ತೆರಿಗೆ ವಿಧಿಸುವುದಾಗಿ ಈ ಹಿಂದೆ ಚೀನಾ ಕೂಡ ಬೆದರಿಕೆ ಒಡ್ಡಿತ್ತು.

## 4. ಭಾರತಕ್ಕೆ ಅಪಾಚೆ ಕಾಪ್ಟರ್ ಮಾರಾಟಕ್ಕೆ ಅಮೆರಿಕ ಅಸ್ತು

### ಪ್ರಮುಖ ಸುದ್ದಿ

- ಬಹು ದಿನಗಳ ನಂತರ ಭಾರತೀಯ ಸೇನೆಗೆ 6,288 ಕೋಟಿ ರೂ. ಮೊತ್ತದಲ್ಲಿ ಆರು ಅತ್ಯಾಧುನಿಕ ಅಪಾಚೆ ಹೆಲಿಕಾಪ್ಟರ್‌ಗಳನ್ನು ಮಾರಾಟ ಮಾಡಲು ಅಮೆರಿಕ ಸರಕಾರ ಅನುಮೋದನೆ ನೀಡಿದೆ.

### ಮುಖ್ಯ ಅಂಶಗಳು

- ಅಪಾಚೆ ಹೆಲಿಕಾಪ್ಟರ್‌ಗಳ ಖರೀದಿಯಿಂದ ಭಾರತದ ರಕ್ಷಣಾ ಸಾಮರ್ಥ್ಯ ವೃದ್ಧಿಗೊಳ್ಳುವುದರ ಜತೆಗೆ ಅಮೆರಿಕ ಭಾರತ ವ್ಯೂಹಾತ್ಮಕ ಸಂಬಂಧಗಳನ್ನು ಇನ್ನಷ್ಟು ಬಲಪಡಿಸಲಿದೆ .
- ಈ ಆರು ಕಾಪ್ಟರ್‌ಗಳ ಜತೆಗೆ ರಾತ್ರಿ ವೀಕ್ಷಣೆಯ ಸೆನ್ಸರ್‌ಗಳು, ಅಗ್ನಿ ನಿಯಂತ್ರಣ ರೇಡಾರ್ ಗಳು, ಜಿಪಿಎಸ್ ಸಾಧನಗಳು, ಹೆಲ್‌ಫೈರ್ ಆ್ಯಂಟಿ ಆರ್ಮರ್ ಮತ್ತು ಸ್ಟಿಂಗರ್ ಬ್ಲಾಕ್ ಐ-92ಎಚ್ ಕ್ಷಿಪಣಿಗಳ ಮಾರಾಟವೂ ಗುತ್ತಿಗೆಯಲ್ಲಿ ಸೇರಿದ್ದು, ಭಾರತದ ಬತ್ತಳಿಕೆ ಸೇರಲಿವೆ.
- ಸರಕಾರದ ಈ ಒಪ್ಪಿಗೆಗೆ ಸಂಸದರು ಆಕ್ಷೇಪ ವ್ಯಕ್ತಪಡಿಸದಿದ್ದಲ್ಲಿ . ನಿರಾಯಾಸವಾಗಿ ಮುಂದುವರಿಯಲಿದೆ. ಅಮೆರಿಕದ ಪ್ರಸಿದ್ಧ ವಿಮಾನ ತಯಾರಿಕಾ ಕಂಪನಿ ಬೋಯಿಂಗ್ ಈ ಹೆಲಿಕಾಪ್ಟರ್‌ಗಳನ್ನು ತಯಾರಿಸುತ್ತಿದೆ.
- ಈ ಹಿಂದಿನ ಒಪ್ಪಂದದಂತೆ ಭಾರತಕ್ಕೆ 6 ಅಪಾಚೆ ಎಎಚ್-64ಇ ಕಾಪ್ಟರ್‌ಗಳನ್ನು ಮಾರಾಟ ಮಾಡಲು ಅಮೆರಿಕ ಮುಂದಾಗಿತ್ತು. ಆದರೆ ಒಪ್ಪಂದಕ್ಕೆ ಅಮೆರಿಕ ಸರಕಾರ ಇದುವರೆಗೂ ಅನುಮೋದನೆ ನೀಡಿರಲಿಲ್ಲ. ಈಗ ಎಲ್ಲ ಪ್ರಕ್ರಿಯೆಗಳು ಪೂರ್ಣಗೊಂಡಿದ್ದರಿಂದ ಈ ಒಪ್ಪಿಗೆ ಸೂಚಿಸಿದೆ.

ಏನಿದರ ವಿಶೇಷ ?

- ಅಮೆರಿಕದ ಬೋಯಿಂಗ್ ಕಂಪನಿ ತಯಾರಿಸುವ ಅಪಾಚೆ ಎಎಚ್-64ಇ ದಾಳಿ ಹೆಲಿಕಾಪ್ಟರ್ ನಾಲ್ಕು ಬ್ಲೇಡ್ ಗಳು ಹಾಗೂ ಅವಳಿ ಎಂಜಿನ್ ಹೊಂದಿವೆ. ಹೆಚ್ಚು ಸದ್ದು ಮಾಡದ ಹಾಗೂ ಎಲ್ಲಾ ಹವಾಗುಣಕ್ಕೆ ಹೊಂದಿಕೊಂಡು ರಾತ್ರಿ ವೇಳೆಯೂ ಕಾರ್ಯಾಚರಿಸಬಲ್ಲ ಅತ್ಯಾಧುನಿಕ ತಂತ್ರಜ್ಞಾನ ಹೊಂದಿದೆ.
- 60 ಸೆಕೆಂಡುಗಳಲ್ಲಿ 128ಕ್ಕೆ ಕಡಿಮೆಯಿಲ್ಲದಂತೆ ಗುರಿಗಳನ್ನು ವರ್ಗೀಕರಿಸಿ ಆದ್ಯತೆ ಮೇಲೆ ಹೊಡೆದುರುಳಿಸುವ ಸಾಮರ್ಥ್ಯ ಹೊಂದಿದೆ.

**5. ಭಾರತ ಮತ್ತು ಫ್ರಾನ್ಸ್ ನಡುವೆ ಸುಸ್ಥಿರ ನಗರಾಭಿವೃದ್ಧಿ ಕ್ಷೇತ್ರದಲ್ಲಿ ತಾಂತ್ರಿಕ ಸಹಕಾರ ಕುರಿತ ಒಪ್ಪಂದಕ್ಕೆ ಸಂಪುಟ ಅಂಗೀಕಾರ.**

ಪ್ರಮುಖ ಸುದ್ದಿ

IAS/KAS
ನಮ್ಮ ಐಎಎಸ್ ಅಕಾಡೆಮಿ
ನಿಮ್ಮೂರಿಂದ..... ಮಸ್ಸೂರಿಗೆ/ಮೈಸೂರಿಗೆ

- ಪ್ರಧಾನ ಮಂತ್ರಿ ಶ್ರೀ ನರೇಂದ್ರ ಮೋದಿ ಅವರ ಅಧ್ಯಕ್ಷತೆಯಲ್ಲಿ ನಡೆದ ಕೇಂದ್ರ ಸಂಪುಟ ಸಭೆಯು ಭಾರತ ಮತ್ತು ಫ್ರಾನ್ಸ್ ನಡುವೆ 2018ರ ಮಾರ್ಚ್ ತಿಂಗಳಲ್ಲಿ ಅಂಕಿತ ಹಾಕಲಾದ ಸುಸ್ಥಿರ ನಗರಾಭಿವೃದ್ಧಿ ಕ್ಷೇತ್ರದಲ್ಲಿ ತಾಂತ್ರಿಕ ಸಹಕಾರ ಕುರಿತ ಒಪ್ಪಂದದ ಪರಾಮರ್ಶೆ ನಡೆಸಿತು.ಈ ಒಪ್ಪಂದವು ಐದು ವರ್ಷ ಕಾಲ ಜಾರಿಯಲ್ಲಿರುತ್ತದೆ.

ಮುಖ್ಯ ಅಂಶಗಳು

- ಈ ಒಪ್ಪಂದದ ಉದ್ದೇಶ ಸ್ಮಾರ್ಟ್ ಸಿಟಿಗಳ ಅಭಿವೃದ್ಧಿ, ನಗರ ಜನಸಮೂಹ ಸಾರಿಗೆ ವ್ಯವಸ್ಥೆಯ ಅಭಿವೃದ್ಧಿ, ನಗರ ಜನವಸತಿ ಮತ್ತು ಸೌಲಭ್ಯಗಳು ( ನೀರು ಸರಬರಾಜು ಮತ್ತು ತ್ಯಾಜ್ಯ ಸಾಗಾಣಿಕೆ ವ್ಯವಸ್ಥೆಗಳು) , ಘನ ತ್ಯಾಜ್ಯ ವಿಲೇವಾರಿ ಮತ್ತು ಸಂಸ್ಕರಣೆ, ಭೂಕಂದಕಗಳಲ್ಲಿ ತ್ಯಾಜ್ಯ ಪರಿಹಾರ , ಆದಾಯವಿಲ್ಲದ ನೀರಿನ ನಿರ್ವಹಣೆ, ನೀರಿನ ಪುನರ್ಬಳಕೆ ಮತ್ತು ಸಂಸ್ಕರಣೆ, ತಂತ್ರಜ್ಞಾನ ವರ್ಗಾವಣೆ, ಅಂತರ್ಜಲ ಹಿಡಿದಿಟ್ಟುಕೊಳ್ಳುವ ಭೂಮಿಯ ಒಳಗಿನ ವ್ಯವಸ್ಥೆಗೆ ಕೃತಕ ಜಲಪೂರಣ ಮಾಡುವ ಮೂಲಕ ತಾಜಾ ನೀರಿನ ಸಂರಕ್ಷಣೆ, ಆರ್ಥಿಕ ವೃತ್ತ, ಸಾಮೂಹಿಕ ವಸತಿ, ಹಸಿರು ಮನೆಗಳು, ನಗರ ಯೋಜನೆ, ಪರಂಪರೆ, ಮಾನವ ಸಂಪನ್ಮೂಲ ಅಭಿವೃದ್ಧಿ, ಸಾಮರ್ಥ್ಯ ವರ್ಧನೆ, ಮತ್ತು ಪರಸ್ಪರ ಒಪ್ಪಿಕೊಂಡ ಇತರ ವಲಯಗಳಲ್ಲಿ ಸಹಕಾರ

### ಅನುಷ್ಠಾನ ಕಾರ್ಯತಂತ್ರ

- ಈ ಒಪ್ಪಂದದಡಿಯಲ್ಲಿ ಸಹಕಾರಕ್ಕೆ ಸಂಬಂಧಿಸಿದ ಕಾರ್ಯಕ್ರಮಗಳ ರೂಪುರೇಖೆ ರೂಪಿಸಲು ಮತ್ತು ಅನುಷ್ಠಾನಕ್ಕಾಗಿ ಜಂಟಿ ಕಾರ್ಯಪಡೆಯನ್ನು (ಜೆ.ಡಬ್ಲ್ಯು.ಜಿ.) ಸ್ಥಾಪಿಸಲಾಗುವುದು. ಜಂಟಿ ಕಾರ್ಯಪಡೆಯು ವರ್ಷಕ್ಕೊಂದು ಬಾರಿ ಸಭೆ ಸೇರಲಿದ್ದು ಪರ್ಯಾಯ ರೀತಿಯಲ್ಲಿ ಒಂದು ವರ್ಷ ಭಾರತದಲ್ಲಿ ಸಭೆ ನಡೆದರೆ ಮತ್ತೊಂದು ವರ್ಷ ಫ್ರಾನ್ಸ್ ನಲ್ಲಿ ಸಭೆ ನಡೆಯಲಿದೆ.

### ಪ್ರಮುಖ ಪರಿಣಾಮ

- ಈ ಒಪ್ಪಂದವು ಎರಡೂ ದೇಶಗಳ ನಡುವೆ ಸುಸ್ಥಿರ ನಗರ ಅಭಿವೃದ್ಧಿ ಕ್ಷೇತ್ರಕ್ಕೆ ಸಂಬಂಧಿಸಿ ದ್ವಿಪಕ್ಷೀಯ ಸಹಕಾರ ವರ್ಧನೆಗೆ ಪ್ರಚೋದಕವಾಗಲಿದೆ.

### ಪ್ರಯೋಜನಗಳು

- ಈ ಒಪ್ಪಂದವು ಸ್ಮಾರ್ಟ್ ನಗರಗಳ ಅಭಿವೃದ್ಧಿ, ನಗರ ಸಾಮೂಹಿಕ ಸಾರಿಗೆ ವ್ಯವಸ್ಥೆ, ನಗರ ಜನ ವಸತಿ ಮತ್ತು ಸೌಲಭ್ಯಗಳು (ನೀರು ಸರಬರಾಜು ಮತ್ತು ತ್ಯಾಜ್ಯ ಸಾಗಾಟ ವ್ಯವಸ್ಥೆಗಳು) , ಘನ ತ್ಯಾಜ್ಯ ವಿಲೇವಾರಿ ಮತ್ತು ಸಂಸ್ಕರಣೆ, ಭೂಕಂದಕಗಳಲ್ಲಿ ತುಂಬಿಸುವಿಕೆ ಪರಿಹಾರ, ಕೈಗೆಟಕುವ ದರದಲ್ಲಿ ವಸತಿ, ತ್ಯಾಜ್ಯ ನಿರ್ವಹಣೆ, ನಗರ ಪರಿಸರ ಮತ್ತು ಪರಂಪರೆ ಸಂರಕ್ಷಣೆ ಕ್ಷೇತ್ರಗಳಲ್ಲಿ ಉದ್ಯೋಗ ಸೃಷ್ಟಿ ಮಾಡುವ ನಿರೀಕ್ಷೆ ಇದೆ.

## 6. ಸಣ್ಣ ಉಪಗ್ರಹಗಳ ಉಡ್ಡಯನಕ್ಕೆ ಇಸ್ರೋ ಸಜ್ಜು

### ಪ್ರಮುಖ ಸುದ್ದಿ

- ಭಾರತೀಯ ಬಾಹ್ಯಾಕಾಶ ಸಂಶೋಧನಾ ಸಂಸ್ಥೆ ಸುಮಾರು 30 ಸಣ್ಣ ಉಪಗ್ರಹಗಳನ್ನು ಉಡಾಯಿಸಲಿದೆ. ಆಗಸ್ಟ್ ವೇಳೆಗೆ ಈ ಉಡಾವಣೆ ನಡೆಯುವ ಸಾಧ್ಯತೆಯಿದೆ. ಭೂಮಿಯ ಮೇಲೆ ನಿಗಾ ವಹಿಸುವ ಈ ಉಪಗ್ರಹಗಳನ್ನು ವಿದೇಶಿ ಗ್ರಾಹಕರಿಗಾಗಿ ನೀಡಲಾಗುತ್ತಿದೆ. ಪಿಎಸ್ಎಲ್‌ವಿ – ಸಿ 42 ಉಡ್ಡಯನ ವಾಹನ ಈ ಉಪಗ್ರಹಗಳನ್ನು ಅಂತರಿಕ್ಷಕ್ಕೆ ಹೊತ್ತೊಯ್ಯಲಿದೆ.

ನಮ್ಮ ಐಎಎಸ್ ಅಕಾಡೆಮಿ
ನಿಮ್ಮೂರಿಂದ..... ಮಸ್ಸೂರಿಗೆ/ಮೈಸೂರಿಗೆ

### ಮುಖ್ಯ ಅಂಶಗಳು

- ಈ ಉಡ್ಡಯನ ಭಾಗಶಃ ವಾಣಿಜ್ಯ ಬಳಕೆ ಉದ್ದೇಶ ಹೊಂದಿದೆ. ಜ. 12ರಂದು ಪಿಎಸ್ಎಲ್‌ವಿ – ಸಿ 40 ವಾಹನವು ಕಾರ್ಟೋಸ್ಯಾಟ್ 2 ಇ ಸಹಿತ 28 ಗ್ರಾಹಕ ಬಳಕೆ ಉಪಗ್ರಹಗಳು ಮತ್ತು ಎರಡು ಭಾರತೀಯ ಉಪಗ್ರಹಗಳನ್ನು ಹೊತ್ತೊಯ್ದಿತ್ತು. ಸಿ-42 ವಾಹನವು ಈಗಾಗಲೇ ಇರುವ ಗ್ರಾಹಕರು ಮಾತ್ರವಲ್ಲ, ಹೊಸ ಗ್ರಾಹಕರನ್ನೂ ಹೊಂದಿದೆ. ಇಸ್ರೋದ ಉಪಗ್ರಹಗಳ ಎಲ್ಲ ಭಾರ ಸೇರಿದರೆ ಈ ವಾಹನ 800 ಕೆಜಿಯಿಂದ 1 ಸಾವಿರ ಕೆಜಿವರೆಗೆ ತೂಗುತ್ತದೆ.
- ಇದುವರೆಗೆ ಪಿಎಸ್ಎಲ್‌ವಿ ವಿದೇಶದ ಗ್ರಾಹಕರಿಗಾಗಿ 237 ಉಪ ಗ್ರಹಗಳನ್ನು ಉಡಾಯಿಸಿದೆ. ಕೆಲವು ಬಾರಿ ಒಂದೊಂದೇ ಉಪಗ್ರಹಗಳನ್ನು ಉಡಾಯಿಸಲಾಗಿದೆ.
- ಸಿ- 42 ಪಿಎಸ್ಎಲ್‌ವಿ 2018ರ ನಾಲ್ಕನೇ ಗುರಿ. ಇದೇ ವೇಳೆಗೆ ಇಂಥ ಉಪಗ್ರಹಗಳನ್ನು ದೊಡ್ಡ ಪ್ರಮಾಣದಲ್ಲಿ ಉಡಾಯಿಸಲು ಇಸ್ರೋ ಯೋಜನೆ ಹಾಕಿಕೊಂಡಿತ್ತು. 5,400 ಕೆಜಿ ತೂಕದ

ಸಂವಹನ ಉಪಗ್ರಹ ಜಿಸ್ಯಾಟ್ -11ನ್ನು ಬೆಂಗಳೂರಿಗೆ ಪರೀಕ್ಷೆಗಾಗಿ ತರಲಾಗಿದೆ. ಅದನ್ನು ಉಡಾಯಿಸುವ ದಿನಾಂಕ ನಿಗದಿಯಾಗಿಲ್ಲ.

OTHERS

**1. ವಿಶ್ವ ರಕ್ತದಾನಿಗಳ ದಿನ**

**ಪ್ರಮುಖ ಸುದ್ದಿ**

- ವಿಶ್ವಾದ್ಯಂತ ಜೂನ್ 14 ಅನ್ನು ರಕ್ತದಾನಿಗಳ ದಿನವಾಗಿ ಆಚರಿಸಲಾಗುತ್ತದೆ. ರಕ್ತದಾನ ಮಾಡುವುದರಿಂದ ಉಂಟಾಗುವ ಪ್ರಯೋಜನ ಗಳ ಬಗ್ಗೆ ಅರಿವು ಮೂಡಿಸುವ ಸಲುವಾಗಿ ಆಚರಿಸಲಾಗುತ್ತದೆ .
- ಈ ವರ್ಷ 'ಬ್ಲಡ್ ಕನೆಕ್ಟ್ಸ್ ಅಸ್ ಆಲ್ ' ಎಂಬ ಥೀಮ್‌ನಡಿ ಆಚರಿಸಲಾಗುತ್ತಿದೆ.

ನಮ್ಮ ಐಎಎಸ್ ಅಕಾಡೆಮಿ
ನಿಮ್ಮೂರಿಂದ..... ಮಸ್ಸೂರಿಗೆ/ಮೈಸೂರಿಗೆ

**ಮುಖ್ಯ ಅಂಶಗಳು**

- ದಕ್ಷಿಣ ಆಫ್ರಿಕಾದ ಜೋಹಾನ್ಸ್ ಬರ್ಗ್ ನಲ್ಲಿ 2004ರಲ್ಲಿ ರಕ್ತದಾನಿಗಳ ದಿನ ಆಚರಣೆ ಆರಂಭವಾಯಿತು. ರಕ್ತ ವರ್ಗಾವಣಾ ವಿಜ್ಞಾನದಲ್ಲಿ ನೊಬೆಲ್ ಪ್ರಶಸ್ತಿ ಪಡೆದ ವಿಜ್ಞಾನಿ ಕಾರ್ಲ್ ಲ್ಯಾಂಡ್ ಸ್ಟಿನರ್ ಜನ್ಮದಿನದ ನೆನಪಿಗಾಗಿ ಈ ದಿನವನ್ನು ಆಚರಿಸಲಾಗುತ್ತದೆ. ಈತ ರಕ್ತವನ್ನು ಎ, ಬಿ, ಒ ಎಂಬ ಗುಂಪುಗಳನ್ನಾಗಿ ವಿಂಗಡಿಸುವ ಬಗೆಯನ್ನು ಕಂಡುಹಿಡಿದ. ಇಂದಿಗೂ ಈ ಬಗೆಯಲ್ಲಿಯೇ ರಕ್ತವನ್ನು ವಿಂಗಡಿಸಲಾಗುತ್ತದೆ.

**ಉದ್ದೇಶವೇನು?:**

- ವಿಶ್ವದ ಅರ್ಧದಷ್ಟು ರಾಷ್ಟ್ರಗಳಲ್ಲಿ ರಕ್ತದ ಕೊರತೆ ಇದೆ. ಆದ್ದರಿಂದ ಸ್ವಯಂಪ್ರೇರಿತ ರಕ್ತದಾನದ ಮಹತ್ವವನ್ನು ಸಾರ್ವಜನಿಕರಿಗೆ ಮನವರಿಕೆ ಮಾಡುಕೊಡುವುದು, ಎಲ್ಲ ಆರೋಗ್ಯವಂತರನ್ನು ಸ್ವಯಂಪ್ರೇರಿತ ರಕ್ತದಾನಕ್ಕೆ ಪ್ರೇರೇಪಿಸುವುದು ಈ ದಿನದ ಉದ್ದೇಶವಾಗಿದೆ.

## 2. ಅಮೆರಿಕದ ಕಂಪನಿಗೆ ದಿವ್ಯಾ ಸಿಎಫ್‌ಒ

### ಪ್ರಮುಖ ಸುದ್ದಿ

- ಅಮೆರಿಕದ ಅತಿದೊಡ್ಡ ಕಾರು ತಯಾರಿಕಾ ಕಂಪನಿ 'ಜನರಲ್ ಮೋಟಾರ್‌ನ (ಜಿಎಂ) ಮುಖ್ಯ ಹಣಕಾಸು ಅಧಿಕಾರಿಯಾಗಿ (ಸಿಎಫ್‌ಒ) ಭಾರತೀಯ ಮೂಲದ ಅಮೆರಿಕ ಪ್ರಜೆ ದಿವ್ಯಾ ಸೂರ್ಯದೇವರ ನೇಮಕವಾಗಿದ್ದಾರೆ. ಈ ಮೂಲಕ ಆಟೋಮೊಬೈಲ್ ಉದ್ಯಮದಲ್ಲಿ ಸಿಎಫ್‌ಒ ಹುದ್ದೆಗೇರಿದ ಮೊದಲ ಮಹಿಳೆ ಎಂಬ ಹೆಗ್ಗಳಿಕೆಗೆ ಪಾತ್ರರಾಗಿದ್ದಾರೆ.

- 39ರ ಹರೆಯದ ದಿವ್ಯಾ ಸೆಪ್ಟೆಂಬರ್ 1ರಿಂದ ಅಮೆರಿಕದ ಅತಿ ದೊಡ್ಡ ಕಾರು ಕಂಪನಿಯ ಉನ್ನತ ಹುದ್ದೆ ಅಲಂಕರಿಸಲಿದ್ದಾರೆ. ಮಹಿಳಾ ಮುಖ್ಯ ಕಾರ್ಯನಿರ್ವಹಣಾ ಅಧಿಕಾರಿ (ಸಿಇಒ) ಹೊಂದಿರುವ ವಿಶ್ವದ ಏಕೈಕ ಆಟೋಮೊಬೈಲ್ ಕಂಪನಿ ಇದಾಗಿದೆ.
- 2014ರಿಂದ ಮೇರಿ ಬಾರ್ರಾ ಕಂಪನಿಯ ಸಿಇಒ ಆಗಿದ್ದಾರೆ. ಇದೀಗ ಇವರ ನಂತರದ ಸ್ಥಾನಕ್ಕೂ ಮಹಿಳೆಯನ್ನೇ ನೇಮಕ ಮಾಡಿದ್ದು, ಆ ಮಹಿಳೆ ಭಾರತೀಯ ಮೂಲದವರಾಗಿರುವುದು ವಿಶೇಷ. ಜಪಾನ್‌ನ ಬೃಹತ್ ತಂತ್ರಜ್ಞಾನ ಕಂಪನಿ 'ಸಾಫ್ಟ್ ಬ್ಯಾಂಕ್ ಗ್ರೂಪ್ ಕಾರ್ಪ್'ನಿಂದ 2.25 ಬಿಲಿಯನ್ ಡಾಲರ್ ಹೂಡಿಕೆ ತಮ್ಮ ಕಂಪನಿಗೆ ಬರುವಂತೆ ಮಾಡುವಲ್ಲಿ ದಿವ್ಯಾ ಯಶಸ್ವಿಯಾಗಿದ್ದರು.

## 3. ಗೌರಿಶಂಕರಕ್ಕೆ ಕಸದ ಅವಮಾನ

### ಪ್ರಮುಖ ಸುದ್ದಿ

- ವರ್ಷದಿಂದ ವರ್ಷಕ್ಕೆ ವಿಶ್ವದ ಅತ್ಯುನ್ನತ ಶಿಖರ ಎವರೆಸ್ಟ್ (ಗೌರಿಶಂಕರ) ಅನ್ನು ಏರುವವರ ಸಂಖ್ಯೆ ಗಣನೀಯವಾಗಿ ಹೆಚ್ಚಿದೆ. ಹೀಗಾಗಿ, ಪರ್ವತದ ಹಿಮದ ಹಾದಿಗಳು ಮಲಿನಗೊಳ್ಳುತ್ತಿವೆ. ಪರ್ವತಾರೋಹಣ ವೇಳೆ ತಿನ್ನುವ ಆಹಾರದಿಂದ ಹಿಡಿದು, ಬಿಸಾಕುವ ಕಸ, ತ್ಯಾಜ್ಯಗಳು ಈಗ ಪರ್ವತದ ಒಡಲನ್ನು ತುಂಬಿಕೊಂಡಿವೆ.

**ಸರಕಾರದ ಕ್ರಮಗಳೇನು?**

- **ನೇಪಾಳ**
  - ಪರ್ವತದ ನೇಪಾಲ ಪಾರ್ಶ್ವ ಏರಲು ಬಯಸುವ ಚಾರಣಿಗರಿಗೆ 2.70 ಲಕ್ಷ ರೂ. ಠೇವಣಿ
  - ಪರ್ವತದಿಂದ ಇಳಿಯುವಾಗ ಕನಿಷ್ಠ 8 ಕೆ.ಜಿ. ಕಸ ತರಲೇಬೇಕು.
  - ನಿಗದಿತ ಕಸ ತಂದರೆ ಮಾತ್ರ ಠೇವಣಿ ಹಣ ಸಂಪೂರ್ಣ ವಾಪಸ್

- **ಟಿಬೆಟ್**
  - ಟಿಬೆಟ್ ಕಡೆಯ ಪಾರ್ಶ್ವವನ್ನು ಹತ್ತ ಬಯಸುವವರಿಗೆ ಡೆಪಾಸಿಟ್ ಇಲ್ಲ.
  - ಪರ್ವತದಿಂದ ಕನಿಷ್ಠ 8 ಕೆಜಿ ಕಸ ತರಲೇಬೇಕು
  - ನಿಗದಿತ ಕಸಕ್ಕಿಂತ ಕಡಿಮೆ ಕಸ ತಂದರೆ ಪ್ರತಿ ಕೆಜಿಗೆ ಅಂದಾಜು 7,000 ರೂ. ದಂಡ

- 1953 -ತೇನ್ ಸಿಂಗ್, ಹಿಲೇರಿ ಮೊದಲ ಬಾರಿಗೆ ಪರ್ವತ ಏರಿದ ವರ್ಷ.

## 4. 106ನೇ ಭಾರತೀಯ ವಿಜ್ಞಾನ ಸಮ್ಮೇಳನ

**ಪ್ರಮುಖ ಸುದ್ದಿ**

- ಜಲಂಧರ್‌ನಲ್ಲಿ 106ನೇ ಭಾರತೀಯ ವಿಜ್ಞಾನ ಸಮ್ಮೇಳನ (ಇಂಡಿಯನ್ ಸಯನ್ಸ್ ಕಾಂಗ್ರೆಸ್) 2019ರ ಜನವರಿ 3ರಿಂದ 7ರ ತನಕ ನಡೆಯಲಿದ್ದು, ಪ್ರಧಾನಿ ನರೇಂದ್ರ ಮೋದಿಯವರು ಉದ್ಘಾಟಿಸಲಿದ್ದಾರೆ.
- ದೇಶ ಮತ್ತು ವಿದೇಶಗಳ 300 ಪ್ರಮುಖ ವಿಜ್ಞಾನಿಗಳು ಈ ಸಮಾವೇಶದಲ್ಲಿ ಭಾಗವಹಿಸಲಿದ್ದಾರೆ. ಭವಿಷ್ಯದ ಭಾರತ: ವಿಜ್ಞಾನ ಮತ್ತು ತಂತ್ರಜ್ಞಾನ' ಈ ಸಮ್ಮೇಳನದ ಪ್ರಮುಖ ವಿಷಯವಾಗಿದೆ. ಲವ್ಲಿ ಪ್ರೊಫೆಷನಲ್ ಯುನಿವರ್ಸಿಟಿ (ಎಲ್‌ಪಿಯು) ಈ ಸಮ್ಮೇಳನದ ಆತಿಥೇಯತ್ವವಹಿಸಿದೆ.
- ಎಲ್‌ಪಿಯು ಕ್ಯಾಂಪಸ್‌ನಲ್ಲಿ ಸಮ್ಮೇಳನ ನಡೆಯಲಿದೆ. ಒಟ್ಟು ಸುಮಾರು 15,000ಕ್ಕೂ ಹೆಚ್ಚು ಪ್ರತಿನಿಧಿಗಳು ಈ 5 ದಿನಗಳ ಸಮ್ಮೇಳನದಲ್ಲಿ ಭಾಗವಹಿಸುವ ನಿರೀಕ್ಷೆ ಇದೆ.
- ಮಕ್ಕಳ ವಿಜ್ಞಾನ ಸಮಾವೇಶ, ಮಹಿಳಾ ವಿಜ್ಞಾನ ಸಮಾವೇಶ, ವಿಜ್ಞಾನ ಸಂವಹನಕಾರರ ಸಮಾವೇಶ, ರಾಷ್ಟ್ರೀಯ ಮತ್ತು ಅಂತಾರಾಷ್ಟ್ರೀಯ ವಿಜ್ಞಾನ ವಸ್ತು ಪ್ರದರ್ಶನ ಕೂಡ ನಡೆಯಲಿದೆ.

IAS/KAS

## 5. 23ನೇ ಯುರೋಪಿಯನ್ ಚಲನಚಿತ್ರೋತ್ಸವ

ನಮ್ಮ ಐಎಎಸ್ ಅಕಾಡೆಮಿ
ನಿಮ್ಮೂರಿಂದ..... ಮಸ್ಸೂರಿಗೆ/ಮೈಸೂರಿಗೆ

### ಪ್ರಮುಖ ಸುದ್ದಿ

- 23ನೇ ಯುರೋಪಿಯನ್ ಚಲನಚಿತ್ರೋತ್ಸವಕ್ಕೆ ಭಾರತ ಆತಿಥ್ಯವಹಿಸುತ್ತಿದೆ. ಜೂನ್ 18ರಂದು ಆರಂಭವಾಗುವ ಚಲನಚಿತ್ರೋತ್ಸವ ಆಗಸ್ಟ್ 31ರವರೆಗೆ ಆಯೋಜನೆಗೊಳ್ಳಲಿದೆ.
- ಯುರೋಪಿಯನ್ ಒಕ್ಕೂಟದ 23 ಸದಸ್ಯ ರಾಷ್ಟ್ರಗಳ 24 ಚಲನಚಿತ್ರಗಳನ್ನು ಆಯ್ಕೆ ಮಾಡಿ, ಚಲನಚಿತ್ರೋತ್ಸವದಲ್ಲಿ ಪ್ರದರ್ಶಿಸಲಾಗುತ್ತದೆ.
- ಆಯೋಜನೆ: ಚಲನಚಿತ್ರೋತ್ಸವಗಳ ನಿರ್ದೇಶನಾಲಯವು ಕೇಂದ್ರ ವಾರ್ತಾ ಮತ್ತು ಪ್ರಚಾರ ಸಚಿವಾಲಯ ಮತ್ತು ಯುರೋಪಿಯನ್ ಒಕ್ಕೂಟದ ಸದಸ್ಯ ರಾಷ್ಟ್ರಗಳ ರಾಯಭಾರ ಕಚೇರಿ ಹಾಗೂ ಈ ರಾಷ್ಟ್ರಗಳ ವಿವಿಧ ನಿಯೋಗಗಳ ಸಹಕಾರದಲ್ಲಿ ಆಯೋಜನೆಗೊಳ್ಳುತ್ತದೆ.

IAS/KAS
ನಮ್ಮ ಐಎಎಸ್ ಅಕಾಡೆಮಿ
ನಿಮ್ಮೂರಿಂದ..... ಮಸ್ಸೂರಿಗೆ/ಮೈಸೂರಿಗೆ